सरयू

# ಸರಯೂ

ವಿದ್ಯಾಕೇಂದ್ರ ವಾರ್ತಾಪತ್ರ

SARAYU - Kannada Monthly Regn. No. KARKAN/2014/62363

Sep Vol. : 10 Issue : 5 5124/ಶುಭಕೃತ್ ಸಂವತ್ಸರ ಅಕ್ಟೋಬರ್ 2023 ಪುಟ 8 Rs. 10/-

Postal Regn No. PTR/136/2022-24

Licensed to Post without pre-payment

License No: SK/WPP/PTR/117/2022-24



ಶ್ರೀರಾಮ ಮಂದಿರ ಕಲ್ಲಡ್ಕದ ಆಶ್ರಯದಲ್ಲಿ ನಡೆದ **ಶ್ರೀಕೃಷ್ಣ ಜನ್ಮಾಷ್ಟಮಿ**ಯ ಮೊಸರು ಕುಡಿಕೆ ಉತ್ಸವದಲ್ಲಿ ಶ್ರೀರಾಮ ವಿದ್ಯಾಕೇಂದ್ರದ ಪೂರ್ವಗುರುಕುಲ ಮತ್ತು ಶಿಶುಮಂದಿರದ ಪುಟಾಣಿಗಳಿಂದ ಅನಾವರಣಗೊಂಡ **ಶ್ರೀಕೃಷ್ಣಲೋಕ**

07.09.2023







ಶ್ರೀರಾಮ ಮಂದಿರದ ಗಣೇಶೋತ್ಸವದ ಶೋಭಾಯಾತ್ರೆಯಲ್ಲಿ ಶ್ರೀರಾಮ ವಿದ್ಯಾಕೇಂದ್ರದ ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಪದವಿಪೂರ್ವ ಹಾಗೂ ಪದವಿ ವಿದ್ಯಾರ್ಥಿಗಳು ಕುಣಿತ ಭಜನೆ ನಡೆಸಿಕೊಟ್ಟರು.

**48**ನೇ ವರ್ಷದ ಉತ್ಸವದಲ್ಲಿ

**48** ತಂಡಗಳು

**768** ವಿದ್ಯಾರ್ಥಿಗಳು

ಭಾಗವಹಿಸಿದ್ದರು.

20.09.2023



**ಪೂರ್ವತಯಾರಿ ಬೈಠಕ್ 02.9.2023**

ಅಕ್ಟೋಬರ್‌ನಲ್ಲಿ ನಡೆಯುವ ನವದಂಪತಿ ಸಮಾವೇಶದ ಯೋಜನಾ ಬೈಠಕ್‌ನಲ್ಲಿ ಡಾ॥ ಪ್ರಭಾಕರ ಭಟ್ ಮಾರ್ಗದರ್ಶನ ಮಾಡಿದರು. 25 ಮಾತೆಯರು ಉಪಸ್ಥಿತರಿದ್ದರು.



**ವ್ಯವಸ್ಥಾ ಬೈಠಕ್ 22.09.2023**

ವ್ಯವಸ್ಥಾ ಹಂಚಿಕೆ ಬೈಠಕ್‌ನಲ್ಲಿ ರಾ.ಸ್ವ.ಸಮಿತಿಯ ದ.ಮಧ್ಯ ಕ್ಷೇತ್ರಿಯ ಕಾರ್ಯಕಾರಿಣಿ ಸದಸ್ಯೆ ಡಾ। ಕಮಲಾ ಪ್ರ.ಭಟ್ ಮಾರ್ಗದರ್ಶನ ಮಾಡಿದರು. 43 ಮಾತೆಯರು ಉಪಸ್ಥಿತರಿದ್ದರು.



**ಅಕ್ಷರಾಭ್ಯಾಸ, ಪಾಲಕರ ಸಭೆ 31/08/2023**

ಶ್ರೀಕೃಷ್ಣ ಶಿಶುಮಂದಿರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀಮತಿ ಕಮಲ ಪ್ರ.ಭಟ್ ಮಾರ್ಗದರ್ಶನ ಮಾಡಿದರು. ಆಡಳಿತ ಮಂಡಳಿಯ ಸದಸ್ಯರು. ಪಾಲಕರು, ಮಕ್ಕಳು ಉಪಸ್ಥಿತರಿದ್ದರು.

## ಪ್ರಾಥಮಿಕ ಶಾಲೆ



**ಕ್ಷೇತ್ರಮಟ್ಟಕ್ಕೆ ಆಯ್ಕೆ: 1.9.2023 ರಿಂದ 3.9.2023**

ಶ್ರೀ ಕೊತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ, ಸೇಡಮ್‌ನಲ್ಲಿ ನಡೆದ ಪ್ರಾಂತೀಯ ಗಣಿತ ವಿಜ್ಞಾನ ಮೇಳದಲ್ಲಿ ಭೂಮಿಕಾ, ರಾಜೇಶ್ವರಿ ಭಟ್, ಪ್ರಜ್ಞಾ, ಸಾನ್ವಿ ಕಾಮತ್, ವೈಷ್ಣವಿ ಕಡ್ಯ, ಶ್ರೇಯಾ ಎಂ.ಜೆ, ಅಮೂಲ್ಯ ಡಿ, ಶ್ರೀನಿಧಿ ಪ್ರಥಮ ಸ್ಥಾನ ಪಡೆದು ಕ್ಷೇತ್ರ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.



**ಶಿಕ್ಷಕರ ದಿನಾಚರಣೆ : 5.9.2023**

ದಿನದ ಮಹತ್ವವನ್ನು ಅಧ್ಯಾಪಕರಾದ ಸುಮಂತ್ ಆಳ್ವ ಮರುವಾಳ ತಿಳಿಸಿಕೊಟ್ಟರು. ಅಧ್ಯಾಪಕರು 'ಮಹಿಷಮರ್ಧಿನಿ–ನವಶಕ್ತಿ ವೈಭವ', ಜನಪದ ನೃತ್ಯ ಪ್ರದರ್ಶನ ಮಾಡಿದರು. ಮಂತ್ರಿಮಂಡಲದ ವತಿಯಿಂದ ಶಿಕ್ಷಕರಿಗೆ ವಿವಿಧ ಮನೋರಂಜನಾ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು.



**ಸಂಸ್ಕೃತ ಸಪ್ತಾಹ : 6.9.2023**

ಈ ಕಾರ್ಯಕ್ರಮದಲ್ಲಿ 500 ವಿದ್ಯಾರ್ಥಿಗಳು ವಿವಿಧ ನೃತ್ಯಪ್ರದರ್ಶನ, ನಾಟಕ ಹಾಗೂ ರೂಪಕಗಳನ್ನು ಸಂಸ್ಕೃತ ಭಾಷೆಯಲ್ಲಿ ಪ್ರದರ್ಶಿಸಿದರು. ಸಂಸ್ಕೃತ ಸಂಘದ ವಿದ್ಯಾರ್ಥಿಗಳು ನಿರ್ವಹಿಸಿದರು. ಸಂಸ್ಕೃತ ಅಧ್ಯಾಪಕರಾದ ಶ್ರೀಮತಿ ಅನ್ನಪೂರ್ಣ ಎನ್ ಭಟ್ ಹಾಗೂ ಅಕ್ಷತಾ ಸಂಯೋಜಿಸಿದರು.



**ವಿಭಾಗ ಮಟ್ಟಕ್ಕೆ ಆಯ್ಕೆ : 17.9.2023**

ದ.ಕ.ಜಿ.ಪಂ., ಶಾ.ಶಿ.&ಸಾ.ಇ, ಉ.ನಿರ್ದೇಶಕರ ಕಛೇರಿ ಮಂಗಳೂರು, ಕ್ಷೇ.ಶಿ. ಕಛೇರಿ ಪುತ್ತೂರು ಇದರ ಆಶ್ರಯದಲ್ಲಿ ನಡೆದ ಜಿಲ್ಲಾ ಮಟ್ಟದ 14ರ ವಯೋಮಾನದ ಬಾಲಕರ ಕಬಡ್ಡಿ ಪಂದ್ಯಾಟದಲ್ಲಿ ಬಾಲಕರ ತಂಡ ಪ್ರಥಮ ಸ್ಥಾನ ಪಡೆದು ಮೈಸೂರು ವಿಭಾಗ ಮಟ್ಟಕ್ಕೆ ಆಯ್ಕೆಯಾಗಿದೆ.



**ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನ : 15.9.23**

ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯನ್ನು ವೇದವ್ಯಾಸ ಧ್ಯಾನಮಂದಿರದಲ್ಲಿ ನಡೆಯಿತು. ಆ ನಿಮಿತ್ತ ಎಲ್ಲಾ ವಿದ್ಯಾರ್ಥಿಗಳಿಗೆ ಭಾರತದ ಸಂವಿಧಾನ ಪೀಠಿಕೆಯನ್ನು ತರಗತಿವಾರು ಓದಿಸಲಾಯಿತು.





**ಚಿಟ್ಟೆಗಳ ಜೀವನ ಚಕ್ರಗಳ ಅಧ್ಯಯನ : 22.9.2023**

ವಿಜ್ಞಾನ ಸಂಘದ ವಿದ್ಯಾರ್ಥಿಗಳು ಚಿಟ್ಟೆಗಳ ಜೀವನ ಚಕ್ರದ ನಾಲ್ಕು ಹಂತಗಳನ್ನು ಶಾಲಾ ಪರಿಸರದಲ್ಲಿ ಮೂರು ವಾರಗಳಿಂದ ವಿವಿಧ ಹಂತದಲ್ಲಿ ನಿರಂತರ ಅಧ್ಯಯನ ಮಾಡಿದರು. ಮುಖ್ಯೋಪಾಧ್ಯಾಯರು, ಅಧ್ಯಾಪಕರಾದ ರಮ್ಯ ಜೆ, ಜ್ಯೋತಿಶ್ರೀ, ಪೂರ್ಣಿಮ, ಸುಮಂತ್ ಆಳ್ವ ಎಂ, ಬಾಲಕೃಷ್ಣ ಉಪಸ್ಥಿತರಿದ್ದರು.

## ಪ್ರೌಢಶಾಲೆ



**ವಲಯ ಮಟ್ಟದ ಪ್ರತಿಭಾ ಕಾರಂಜಿ 2.9.2023**

ದ.ಕ.ಜಿ.ಪಂ, ಶಾ.ಶಿ.ಸಾ.ಇ, ಆಶ್ರಯದಲ್ಲಿ ನಡೆದ ವಲಯ ಮಟ್ಟದ ಪ್ರತಿಭಾಕಾರಂಜಿಯನ್ನು ಡಾ ಪ್ರಭಾಕರ್ ಭಟ್ ಕಲ್ಲಡ್ಕ ಇವರು ಉದ್ಘಾಟಿಸಿದರು. ಬಾ.ಗ್ರಾಮ ಪಂಚಾಯತಿ ಅಧ್ಯಕ್ಷರಾದ ಅಣ್ಣು ಪೂಜಾರಿ ಬಿ.ಇ.ಓ ಶ್ರೀ ಮಂಜುನಾಥನ್ ಎಂ.ಜಿ, ವಲಯದ ಎಲ್ಲಾ ಸಿ.ಆರ್.ಪಿಗಳು, ವಿದ್ಯಾ–ಕೇಂದ್ರದ ಹಿರಿಯರು, ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು.



**ಬಾಲಕರ ಕಬಡ್ಡಿ ಪಂದ್ಯಾಟದಲ್ಲಿ ಪ್ರಥಮ 2.9.23**

ಸರಕಾರಿ ಪ್ರೌಢಶಾಲೆ ಶಂಭೂರು ಇಲ್ಲಿ ನಡೆದ ಕಲ್ಲಡ್ಕ ವಲಯ ಮಟ್ಟದ ಪ್ರೌಢಶಾಲಾ ಬಾಲಕರ ಕಬಡ್ಡಿ ಪಂದ್ಯಾಟದಲ್ಲಿ ಶ್ರೀ ರಾಮ ಪ್ರೌಢಶಾಲೆ ಕಲ್ಲಡ್ಕವು ಪ್ರಥಮ ಸ್ಥಾನವನ್ನು ಪಡೆದು ತಾಲೂಕು ಮಟ್ಟಕ್ಕೆ ಆಯ್ಕೆಯಾಗಿದೆ.



**ಬಾಲಕಿಯರ ಕಬ್ಬಡ್ಡಿ ಪಂದ್ಯಾಟದಲ್ಲಿ ದ್ವಿತೀಯ 2.9.23**

ಸರಕಾರಿ ಪ್ರೌಢಶಾಲೆ ಶಂಭೂರಿನಲ್ಲಿ ನಡೆದ ವಲಯ ಮಟ್ಟದ ಪ್ರೌಢಶಾಲಾ ಬಾಲಕಿಯರ ವಿಭಾಗದ ಕಬ್ಬಡ್ಡಿ ಪಂದ್ಯಾಟದಲ್ಲಿ ಶ್ರೀರಾಮ ಪ್ರೌಢಶಾಲೆಯು ದ್ವಿತೀಯ ಸ್ಥಾನವನ್ನು ಪಡೆದುಕೊಂಡಿದೆ.

# ಸುಭಾಷಿತ ಮಂಜರಿ

ಅಕಾರಣಂ ರೂಪಮ
ಕಾರಣಂ ಕುಲಂ ।
ಮಹತ್ತು ನೀಚೇಷು ಚ
ಕರ್ಮ ಶೋಭತೇ ॥

ಕೆಲಸದ ಘನತೆಯೇ ಹೊಗಳಲು ಯೋಗ್ಯ.
ಆಕೃತಿಯಾಗಲಿ, ಕುಲವಾಗಲಿ ಅಲ್ಲ.
ಮಹಾತ್ಮನಾಗಲಿ ಸಾಮಾನ್ಯನಾಗಿರಲಿ ಮಾಡಿದ
ಕೆಲಸದ ಘನತೆಯಿಂದ ಉತ್ತಮನೆನಿಸುತ್ತಾನೆ.

## ಸಂಪಾದಕೀಯ

ಆತ್ಮೀಯ ಓದುಗರೇ,

ಸಪ್ಟೆಂಬರ್ ತಿಂಗಳು ಹಬ್ಬಗಳ ಹೆಬ್ಬಾಗಿಲು. ಕಲ್ಲಡ್ಕ ಶ್ರೀರಾಮ ಮಂದಿರದೊಂದಿಗೆ ನಮ್ಮ ಸಂಬಂಧ ನಿಕಟವಾದುದು ಅಲ್ಲಿ ನಡೆಯುವ ಶ್ರೀಕೃಷ್ಣ ಜನ್ಮಾಷ್ಟಮಿ ಹಾಗೂ ಶ್ರೀ ಗಣೇಶೋತ್ಸವ ಕಾರ್ಯಕ್ರಮಕ್ಕೆ ರಂಗು ತುಂಬುದರಲ್ಲಿ ನಮ್ಮ ಸಂಸ್ಥೆಯ ಪಾಲು ದೊಡ್ಡದು. ಎಂದಿನಂತೆ ಈ ಬಾರಿಯೂ ಶ್ರೀಕೃಷ್ಣಲೋಕ ಮತ್ತು ಕುಣಿತ ಭಜನೆಯೊಂದಿಗೆ ಸಾಗಿ ಬಂದಿದ್ದೇವೆ. ಅಲ್ಲದೇ ವಿವಿಧ ಕ್ರೀಡಾ, ಸಾಂಸ್ಕೃತಿಕ, ಶೈಕ್ಷಣಿಕ ಸಾಧನೆಗಳ ಯಶಸ್ಸನ್ನು ನಿಮ್ಮೊಂದಿಗೆ ಹಂಚಿಕೊಂಡಿದ್ದೇವೆ.

ಅಕ್ಟೋಬರ್ ತಿಂಗಳಲ್ಲಿ ನಡೆದ ನವದಂಪತಿ ಸಮಾವೇಶ, ಹಾಗೂ ಇನ್ನಿತರ ವರದಿಗಳೊಂದಿಗೆ ಎರಡು ತಿಂಗಳ ಸಂಚಿಕೆಗಳು ಒಟ್ಟಾಗಿ ಇದೀಗ ನಿಮ್ಮ ಕೈಸೇರಿದೆ.

ವಂದನೆಗಳೊಂದಿಗೆ

ಸಂಪಾದಕ ಬಳಗ


**ಸಂಪಾದಕೀಯ ಮಂಡಳಿ**

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
**ಕಾರ್ಯನಿರ್ವಾಹಕ ಸಂಪಾದಕರು :**
ಕೃಷ್ಣಪ್ರಸಾದ ಕಾಯರ್‌ಕಟ್ಟೆ
**ಸಹಸಂಪಾದಕರು :**
ಪ್ರೀತಿಕಾ (ಶಿಶುಮಂದಿರ)
ಚೈತ್ರ (ಪ್ರಾಥಮಿಕ ಶಾಲೆ)
ರಾಜೇಶ್ವರಿ (ಪ್ರೌಢಶಾಲೆ)
ರಮ್ಯ (ಸೆಕೆಂಡರಿ ಸ್ಕೂಲ್)
ರಮೇಶ್ (ಪಿಯುಸಿ)
ಪ್ರಸನ್ನಾ (ಪದವಿ)
**ವ್ಯವಸ್ಥಾಪಕ ಸಂಪಾದಕರು :** ಕುಶಾಲಪ್ಪ ಅಮ್ಟೂರು


## ಶಿಶುಮಂದಿರ

**ರಕ್ಷಾಬಂಧನ ಮತ್ತು ಪಾಲಕರ ಸಭೆ 01.09.23**

ಅಕ್ಕಮಹಾದೇವಿ ಶಿಶುಮಂದಿರ ಬಿಸಿರೋಡ್ ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀಮತಿ ಕಮಲ ಪ್ರಭಾಕರ ಭಟ್ ಮಾರ್ಗದರ್ಶ ಮಾಡಿದರು. ಆಡಳಿತ ಮಂಡಳಿಯ ಅಧ್ಯಕ್ಷರು ಹಾಗೂ ಸದಸ್ಯರು. ಪಾಲಕರು ಮತ್ತು ಮಕ್ಕಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

**ಶ್ರೀಕೃಷ್ಣ ಜನ್ಮಾಷ್ಟಮಿ 6.9.2023**

ಶ್ರೀಕೃಷ್ಣ ಶಿಶುಮಂದಿರ ಸಜಿಪದ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಶ್ರೀ ಬಡೆಕ್ಕಿಲ ಸುಬ್ರಹ್ಮಣ್ಯ ಭಟ್ ಇವರು ದಿನದ ಮಹತ್ವವನ್ನು ತಿಳಿಸಿದರು. ಸಜೀಪ ಮಾಗಣೆಯ ತಂತ್ರಿಗಳಾದ ಶ್ರೀ ಸುಬ್ರಹ್ಮಣ್ಯ ಭಟ್ ಹಾಗೂ ಸಜೀಪಮೂನ್ನೂರು ಗ್ರಾಮಪಂಚಾಯತ್‌ನ ಉಪಾಧ್ಯಕ್ಷರು ಶ್ರೀಮತಿ ಸುಮತಿ ಖಂಡಿಗ ಹಾಗೂ ಶಿಶುಮಂದಿರದ ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ಸುರೇಶ್ ಸರ್ತವು ಇವರು ಉಪಸ್ಥಿತರಿದ್ದರು.

**ಪಾಲಕರ ಸಭೆ 27.9.2023**

ಶ್ರೀ ಗಣೇಶ ಶಿಶುಮಂದಿರದಲ್ಲಿ ನಡೆದ ಸಭೆಯಲ್ಲಿ ಶ್ರೀ ಸತೀಶ್ ಭಟ್ ಶಿವಗಿರಿ ಇವರು ಮಾರ್ಗದರ್ಶನ ಮಾಡಿದರು. ಒಟ್ಟು 11 ಮಂದಿ ಪಾಲಕರು ಭಾಗವಹಿಸಿದ್ದರು.

**ಸಾಂಸ್ಕೃತಿಕ ಕಾರ್ಯಕ್ರಮ 7.09.2023**

ನರಿಕೊಂಬು ಯುವಕ ಮಂಡಲದ ವತಿಯಿಂದ ನಡೆದ ಶ್ರೀ ಕೃಷ್ಣ ಜನ್ಮಾಷ್ಟಮಿಯ ಕಾರ್ಯಕ್ರಮದಲ್ಲಿ ಸರಸ್ವತಿ ಶಿಶುಮಂದಿರದ ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು.

**ಸಾಂಸ್ಕೃತಿಕ ಕಾರ್ಯಕ್ರಮ** 6.09.2023

ಸ್ನೇಹಾಂಜಲಿ ಸೇವಾ ಸಂಘದ ವತಿಯಿಂದ ನಡೆದ ಶ್ರೀಕೃಷ್ಣಜನ್ಮಾಷ್ಟಮಿ ಕಾರ್ಯಕ್ರಮದಲ್ಲಿ ಶ್ರೀ ಅಕ್ಕಮಹಾದೇವಿ ಶಿಶುಮಂದಿರದ ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

## ಪ್ರಾಥಮಿಕ ಶಾಲೆ

**ಕ್ಷೇತ್ರಮಟ್ಟಕ್ಕೆ ಆಯ್ಕೆ: 1.9.2023 ರಿಂದ 3.9.2023**

ಶ್ರೀ ಕೊತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ, ಸೇಡಮ್ ಜಿ। ಕಲಬುರಗಿ ಇಲ್ಲಿ ನಡೆದ ಪ್ರಾಂತೀಯ ಗಣಿತ ವಿಜ್ಞಾನ ಮೇಳದಲ್ಲಿ 6ನೇ ತರಗತಿಯ ಭೂಮಿಕಾ ಪ್ರಥಮ ಸ್ಥಾನ, ರಾಜೇಶ್ವರಿ ಭಟ್ ಪ್ರಥಮ ಸ್ಥಾನ, ಸಂಸ್ಕೃತಿ ಜ್ಞಾನ ರಸಪ್ರಶ್ನೆಯಲ್ಲಿ 7ನೇ ತರಗತಿಯ ಪ್ರಜ್ಞಾ, ಸಾನ್ವಿ ಕಾಮತ್, ವೈಷ್ಣವಿ ಕಡ್ಯ ಪ್ರಥಮ ಸ್ಥಾನ, 7ನೇ ತರಗತಿಯ ಶ್ರೇಯಾ ಎಂ.ಜೆ ಪ್ರಥಮ ಸ್ಥಾನ, 7ನೇ ತರಗತಿಯ ಅಮೂಲ್ಯ ಡಿ ಎಸ್ ಮತ್ತು 6ನೇ ತರಗತಿಯ ಶ್ರೀನಿಧಿ ಪ್ರಥಮ ಸ್ಥಾನ ಪಡೆದು ಕ್ಷೇತ್ರಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ. ಸಂಶೋಧನಾರ್ಹ ಪ್ರದರ್ಶನದಲ್ಲಿ 6ನೇ ತರಗತಿಯ ಪಿ. ಸುಶ್ಮಿತಾ ಭಟ್ ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾರೆ.

**ಆದಿತ್ಯ ಎಲ್ 1 ಉಡಾವಣೆ ವೀಕ್ಷಣೆ : 2.9.2023**

ಇಸ್ರೋ ಬಾಹ್ಯಾಕಾಶ ಸಂಸ್ಥೆಯಿಂದ ನಭಕ್ಕೆ ಚಿಮ್ಮಿದ ಆದಿತ್ಯ ಎಲ್ 1 ಉಪಗ್ರಹದ ಉಡಾವಣೆಯ ನೇರಪ್ರಸಾರ ಕಾರ್ಯಕ್ರಮವನ್ನು ಪ್ರಾಥಮಿಕ ವಿಭಾಗದ ವಿದ್ಯಾರ್ಥಿಗಳು ವೀಕ್ಷಿಸಿ ಸಂಭ್ರಮಿಸಿದರು.

**ಜಿಲ್ಲಾ ಮಟ್ಟದಲ್ಲಿ ತೃತೀಯ : 2.9.2023**

ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ದ.ಕ ಜಿಲ್ಲೆ ಮಂಗಳೂರು, ಪ್ರಾಥಮಿಕ ವಿದ್ಯಾರ್ಥಿಗಳ ಜಿಲ್ಲಾ ಮಟ್ಟದ ಆಟೋಟ ಸ್ಪರ್ಧೆಯಲ್ಲಿ 7ನೇ ತರಗತಿಯ ಗುರುನಂದನ್ ರೈ 500 ಮೀ ಮತ್ತು 2 ಕಿ.ಮೀ ಸ್ಕೇಟಿಂಗ್‌ನಲ್ಲಿ ತೃತೀಯ ಸ್ಥಾನ ಪಡೆದಿರುತ್ತಾರೆ.

**ಜಿಲ್ಲಾ ಮಟ್ಟಕ್ಕೆ ಆಯ್ಕೆ : 4.9.2023**

ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಯವರ ಕಛೇರಿ ಬಂಟ್ವಾಳ ಇದರ ವತಿಯಿಂದ ಶ್ರೀ ಸತ್ಯಸಾಯಿ ಲೋಕ ಸೇವಾ ಅ.ಹಿ.ಪ್ರಾ. ಶಾಲೆ ಅಳಿಕೆ ಇಲ್ಲಿ ನಡೆದ ಬಂಟ್ವಾಳ ತಾಲೂಕು ಮಟ್ಟದ ಕಬಡ್ಡಿ ಪಂದ್ಯಾಟದಲ್ಲಿ ಬಾಲಕರ ತಂಡ ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದೆ.

**ಅಧ್ಯಾಪಕರ ಬೈಠಕ್: 12.9.2023**

12.9.2023ರಂದು ವೇದವ್ಯಾಸ ಧ್ಯಾನಮಂದಿರದಲ್ಲಿ ಪ್ರಾಥಮಿಕ ವಿಭಾಗದ ಶೈಕ್ಷಣಿಕ ಪರಿವೀಕ್ಷಕರಾದ ಶ್ರೀ ಚೆನ್ನಪ್ಪ ಆರ್ ಕೋಟ್ಯಾನ್ ಅವರ ಮಾರ್ಗದರ್ಶನದಲ್ಲಿ ಅಧ್ಯಾಪಕರ ಬೈಠಕ್ ನಡೆಯಿತು. ಪೋಷಕರ ಸಭೆಯಲ್ಲಿ ಬಂದಂತಹ ಪೋಷಕರ ಅಭಿಪ್ರಾಯದ ಕುರಿತು ಚರ್ಚಿಸಲಾಯಿತು.

**ಜಿಲ್ಲಾ ಮಟ್ಟದಲ್ಲಿ ದ್ವಿತೀಯ:**

ವಿದ್ಯಾಭಾರತಿ ಕರ್ನಾಟಕ, ದಕ್ಷಿಣ ಕನ್ನಡ ಜಿಲ್ಲೆ ಇದರ ವತಿಯಿಂದ ನಡೆದ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಲಾಂಗ್ ಜಂಪ್ ಸ್ಪರ್ಧೆಯಲ್ಲಿ 7ನೇ ತರಗತಿಯ ಶ್ರೇಯಾಂಕ್ ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾರೆ.

**ಚಿತ್ರ ಬಿಡಿಸುವ ಸ್ಪರ್ಧೆಯಲ್ಲಿ ಪ್ರಥಮ: 15.9.23**

2023ನೇ ಜೆಸಿ ಸಪ್ತಾಹದ ಪ್ರಯುಕ್ತ ಜೆ.ಸಿ.ಐ ಬಂಟ್ವಾಳ ಇದರ ವತಿಯಿಂದ ನಡೆಸಿದ ಬಾಲ ಗಣೇಶ ಚಿತ್ರ ಬಿಡಿಸುವ ಸ್ಪರ್ಧೆಯಲ್ಲಿ 3ನೇ ತರಗತಿಯ ನಿಹಾರಿಕ ಪ್ರಥಮ ಸ್ಥಾನ ಪಡೆದಿರುತ್ತಾರೆ.

## ಪ್ರೌಢಶಾಲೆ

**ವಲಯ ಮಟ್ಟದ ಪ್ರತಿಭಾ ಕಾರಂಜಿ 2/9/2023**

ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಸಾಕ್ಷರತಾ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಬಂಟ್ವಾಳ ಮತ್ತು ಶ್ರೀರಾಮ ಪ್ರೌಢಶಾಲೆ, ಇವುಗಳ ಆಶ್ರಯದಲ್ಲಿ ನಡೆದ ವಲಯ ಮಟ್ಟದ ಪ್ರತಿಭಾಕಾರಂಜಿ 2023–24 ಡಾ ಪ್ರಭಾಕರ್ ಭಟ್ ಕಲ್ಲಡ್ಕ ಇವರು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಾಳ್ತಿಲ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಅಣ್ಣು ಪೂಜಾರಿ ವಹಿಸಿದ್ದರು. ವೇದಿಕೆಯಲ್ಲಿ ಮಂಜುನಾಥನ್ ಎಂ.ಜಿ ಬಂಟ್ವಾಳ ಕ್ಷೇತ್ರ, ಶಿಕ್ಷಣಾಧಿಕಾರಿಗಳು, ರಮೇಶ್ ಎನ್, ಸಹಸಂಚಾಲಕರು, ಶ್ರೀರಾಮ ವಿದ್ಯಾಕೇಂದ್ರ, ಕಲ್ಲಡ್ಕ, ಶಾಂಭವಿ ಆಡಳಿತಾಧಿಕಾರಿ, ಶ್ರೀರಾಮ

ಪ್ರೌಢಶಾಲೆ ಕಲ್ಲಡ್ಕ, ರಾಘವೇಂದ್ರ ಬಳ್ಳಾಲ್, ಕ್ಷೇತ್ರ ಸಮನ್ವಯ ಅಧಿಕಾರಿ, ಬಂಟ್ವಾಳ, ಕಲ್ಲಡ್ಕ ವಲಯ ಶಿಕ್ಷಣ ಸಂಯೋಜಕರಾದ ಪ್ರತಿಮಾ, ಶ್ರೀ ಸತೀಶ್ ರಾವ್, ಸಿ.ಆರ್.ಪಿ, ಮಾಣಿ, ಶ್ರೀ ಸುಧಾಕರ್ ಭಟ್, ಸಿ.ಆರ್.ಪಿ, ಕೆದಿಲ, ಜ್ಯೋತಿ, ಸಿ.ಆರ್.ಪಿ, ಕಲ್ಲಡ್ಕ ಹಾಗೂ ಸಿ.ಆರ್.ಪಿಯವರಾದ ಮಲ್ಲಿಕಾರ್ಜುನ, ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು.

**ವಲಯ ಪ್ರತಿಭಾ ಕಾರಂಜಿ ಪ್ರಶಸ್ತಿಗಳು 2.9.23**

ಪ್ರಥಮ ಸ್ಥಾನ : ಛದ್ಮವೇಷ–ಆದಿತ್ಯ.ಕೆ 10 ಗಾರ್ಗಿ, ಮಿಮಿಕ್ರಿ.–ತೇಜಸ್ ಎಸ್ 10 ಭಾರ್ಗವ, ಆಶುಭಾಷಣ–ಧನ್ವಿತ್ ಎಸ್ (8 ಕಣ್ಣಗಿ)

ದ್ವಿತೀಯ: ಸಂಸ್ಕೃತ ಭಾಷಣ– ಶ್ರದ್ಧಾ 10 ಆಜಾದ್, ರಸಪ್ರಶ್ನೆ ದುರ್ಗಾಶರಣ್ ಭೂಷಣ್ 10ನೇ ಅಜಾದ್

ತೃತೀಯ: ಕನ್ನಡ ಭಾಷಣ : ಮೋನಿಶಾ ಕೆ ಎಂ 8 ಕಣ್ಣಗಿ, ಹಿಂದಿ ಭಾಷಣ ಶಮನ್ 10 ಭಾರ್ಗವ, ಧಾರ್ಮಿಕ ಪಠಣ ಸಂಸ್ಕೃತ –ಶ್ರೀವತ್ಸ ಕೆ 8 ನರೇಂದ್ರ, ಗಝಲ್ ಗಗನ್ 10 ಆಜಾದ್, ಜನಪದ ನವ್ಯಶ್ರೀ ಮತ್ತು ಬಳಗ (10)

**ಸ್ಕೇಟಿಂಗ್ ಸ್ಪರ್ಧೆಯಲ್ಲಿ ಭಾಗಿ 2.9.2023**

ಕೆನರಾ ಪ್ರೌಢಶಾಲೆ ಡೊಂಗರಕೇರಿ ಮಂಗಳೂರು ಇಲ್ಲಿ ನಡೆದ ಜಿಲ್ಲಾ ಮಟ್ಟದ ಸ್ಕೇಟಿಂಗ್‌ನಲ್ಲಿ 14ರ ವಯೋಮಾನದ ಬಾಲಕರ ವಿಭಾಗದಲ್ಲಿ ಪ್ರಜ್ವಲ್.ಕೆ (8ನೇ ಏಕಲವ್ಯ) –500 ಮೀನಲ್ಲಿ ತೃತೀಯ, 2ಕಿ.ಮಿ. ನಲ್ಲಿ ದ್ವಿತೀಯ ಸ್ಥಾನವನ್ನು ಪಡೆದು ರಾಜ್ಯಕ್ಕೆ ಆಯ್ಕೆಯಾಗಿರುತ್ತಾನೆ.

**ಪ್ರಾಂತೀಯ ಗಣಿತ–ವಿಜ್ಞಾನ ಮೇಳ ಮತ್ತು ಸಂಸ್ಕೃತಿ ಮಹೋತ್ಸವ 2023 3.09.2023**

ಕಲ್ಬುರ್ಗಿಯಲ್ಲಿ ನಡೆದ ಪ್ರಾಂತೀಯ ಗಣಿತ–ವಿಜ್ಞಾನ ಮೇಳ ಮತ್ತು ಸಂಸ್ಕೃತಿ ಮಹೋತ್ಸವ ಇದರಲ್ಲಿ ಪ್ರೌಢಶಾಲೆಯ ಆರು ವಿದ್ಯಾರ್ಥಿಗಳು ಭಾಗವಹಿಸಿದ್ದು ಬಾಲವರ್ಗ ವಿಜ್ಞಾನ ಪ್ರದರ್ಶನದ ನವಚಾರಿತ ವಿಭಾಗದಲ್ಲಿ ದಿಶಾನ್ ಪ್ರಥಮ ಸ್ಥಾನ, ಸೆನಾರ್ ವಿಭಾಗದಲ್ಲಿ ಯಕ್ಷಿತ್ ದ್ವಿತೀಯ ಸ್ಥಾನ, ಕಿಶೋರ ವರ್ಗ ವಿಜ್ಞಾನ ಪ್ರರ್ಶನ ಚಲನೆ ಆಧಾರಿತ ಪ್ರತಿರೂಪ ಆಕಾಶ್ ಪ್ರಥಮ ಸ್ಥಾನ, ಹಾಗೂ ಗಣಿತ ಪ್ರದರ್ಶನದಲ್ಲಿ ಧೃತಿ ಪ್ರಥಮ ಸ್ಥಾನ ಪಡೆದಿರುತ್ತಾರೆ.

**ವಿವೇಕಾನಂದ ಇನ್ಸ್ಟಿಟ್ಯೂಟ್ ಆಫ್ ಫಾರ್ಮಾಸುಟಿಕಲ್ ಸೈನ್ಸ್ ಕಟ್ಟಡದ ಉದ್ಘಾಟನೆಯಲ್ಲಿ ಭಾಗಿ 4.9.23**

ವಿವೇಕಾನಂದ ಇನ್ಸಿಟ್ಯೂಟ್ ಆಫ್ ಫಾರ್ಮಾಸುಟಿಕಲ್ ಸೈನ್ಸ್ ಕಟ್ಟಡದ ಉದ್ಘಾಟನೆಯ ಸಮಾರಂಭದಲ್ಲಿ ಪ್ರೌಢಶಾಲೆಯ ಘೋಷಕರು, ವಿದ್ಯಾರ್ಥಿಗಳು ಮುಖ್ಯೋಪಾಧ್ಯಾಯರು ಪಾಲ್ಗೊಂಡರು.

**ಶ್ರೀ ಕೃಷ್ಣ ಜನ್ಮಾಷ್ಟಮಿ ಆಚರಣೆ 7.9.2023**

ಶ್ರೀಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಶ್ರೀರಾಮ ಪ್ರೌಢಶಾಲೆಯಲ್ಲಿ ದಿನಾಂಕ 7/09/2023 ರಂದು ಹಿರಿಯ ಶಿಕ್ಷಕರಾದ ಜಯರಾಮ ಶ್ರೀಮಾನ್ ಇವರು ವಿದ್ಯಾರ್ಥಿಗಳಿಗೆ ಶ್ರೀ ಕೃಷ್ಣನ ಜೀವನದ ಲೀಲೆಗಳನ್ನು ತಿಳಿಸಿ ಹೇಳುತ್ತಾ ಶ್ರೀ ಕೃಷ್ಣ ಜನ್ಮಾಷ್ಟಮಿ ಯ ಶುಭಾಶಯ ಕೋರಿದರು. ಇದೇ ವೇಳೆ ವಿದ್ಯಾರ್ಥಿಗಳು ಭಗವದ್ಗೀತೆಯ ದ್ವಾದಶ ಅಧ್ಯಾಯವನ್ನು ಪಠಣ ಮಾಡಿದರು.

**ಅತ್ಯುತ್ತಮ ರೈಡರ್ ಪ್ರಶಸ್ತಿ 7.9.2023**

ಸಾರ್ವಜನಿಕ ಶಿಕ್ಷಣ ಇಲಾಖೆ ಬಂಟ್ವಾಳ ಮತ್ತು ಸರಕಾರಿ ಪ್ರೌಢಶಾಲೆ ವಿಟ್ಲ ಆಶ್ರಯದಲ್ಲಿ ಜರುಗಿದೆ ಕಬ್ಬಡ್ಡಿ ಪಂದ್ಯಾಟದಲ್ಲಿ ಮೇಘಶ್ರೀ ಅತ್ಯುತ್ತಮ ರೈಡರ್ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾಳೆ.

**ಕಬ್ಬಡ್ಡಿಯಲ್ಲಿ ರಾಷ್ಟ್ರಮಟ್ಟಕ್ಕೆ ಆಯ್ಕೆ 7.09.2023**



ವಿದ್ಯಾಭಾರತಿ ಕರ್ನಾಟಕ–ದಕ್ಷಿಣ ಕನ್ನಡ ಜಿಲ್ಲೆಯ ಬಾಲ ವರ್ಗದ ಕಬ್ಬಡ್ಡಿ ತಂಡದಲ್ಲಿ ಶ್ರೀರಾಮ ಪ್ರೌಢಶಾಲೆಯ 8ನೇ ತರಗತಿಯ ತನ್ವಿ.ಕೆ ಇವರು ಪ್ರಾಂತ ಮತ್ತು ಹೈದರಬಾದಿನಲ್ಲಿ ನಡೆದ ಕ್ಷೇತ್ರ ಮಟ್ಟಕ್ಕೆ ಪ್ರತಿನಿಧಿಸಿ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.

**ತಾಲೂಕು ಮಟ್ಟದ ಕಬ್ಬಡ್ಡಿ ಪಂದ್ಯಾಟ 7.9.23**

ಸಾರ್ವಜನಿಕ ಶಿಕ್ಷಣ ಇಲಾಖೆ ಬಂಟ್ವಾಳ ಮತ್ತು ಸರಕಾರಿ ಪ್ರೌಢಶಾಲೆ ವಿಟ್ಲ ಆಶ್ರಯದಲ್ಲಿ ನಡೆದ 17 ರ ಬಾಲಕಿಯರ ತಾಲೂಕು ಮಟ್ಟದ ಕಬ್ಬಡ್ಡಿ ಪಂದ್ಯಾಟದಲ್ಲಿ ಶ್ರೀರಾಮ ಪ್ರೌಢಶಾಲೆಯ ಬಾಲಕಿಯರು ದ್ವಿತೀಯ ಪ್ರಶಸ್ತಿಯನ್ನು ಪಡೆದು–ಕೊಂಡಿದಾರೆ.

**ವಿದ್ಯಾಭಾರತಿ ಜಿಲ್ಲಾ ಮಟ್ಟದ ಕ್ರೀಡಾಕೂಟ 9.9.23**

ದಿನಾಂಕ 8 ಹಾಗೂ 9 ರಂದು ವಿದ್ಯಾಭಾರತಿ ಜಿಲ್ಲಾ ಮಟ್ಟದ ಕ್ರೀಡಾಕೂಟವು ವಿವೇಕಾನಂದ ಕಾಲೇಜು ಮೈದಾನದಲ್ಲಿ ನಡೆಯಿತು. ಇದರಲ್ಲಿ 17 ರ ವಯೋಮಾನದ ಬಾಲಕರ ವಿಭಾಗದಲ್ಲಿ ಆಶ್ಲೇಷ (9ನೇ ದೇವಶಿಲ್ಪಿ)150 ಮೀ ತೃತೀಯ, ಪ್ರಥಮ್ (10ನೇ ಚ್ಯವನ)110ಮೀ ಹರ್ಡಲ್ಸ್ ತೃತೀಯ, 17 ರ ವಯೋಮಾನದ ಬಾಲಕಿಯರ ವಿಭಾಗದಲ್ಲಿ ಯಶಸ್ವಿನಿ ಶೆಟ್ಟಿ (9ನೇ ಓಬವ್ವ) 3 ಕಿ.ಮೀ. ನಡಿಗೆಯಲ್ಲಿ ದ್ವಿತೀಯ, ನಿಖಿತಾ (10ನೇ ದುರ್ಗಾವತಿ)ತ್ರಿವಿಧ ಜಿಗಿತ ತೃತೀಯ, 4*100 ಮೀ ರಿಲೇ ಹಾಗೂ 4*400 ಮೀ ರಿಲೆಯಲ್ಲಿ ತೃತೀಯ, 14 ರ ವಯೋಮಾನದ ಬಾಲಕಿಯರ ವಿಭಾಗದಲ್ಲಿ *ಗಾನವಿ(8ನೇ ಕಣ್ಣಗಿ)ಚಕ್ರ ಎಸೆತ ಪ್ರಥಮ, ದಿಶಾಲಿ(8ನೇ ಏಕಲವ್ಯ)80ಮೀ ಹರ್ಡಲ್ಸ್ ನಲ್ಲಿ ತೃತೀಯ ಸ್ಥಾನವನ್ನು ಪಡೆದು ಗಾನವಿ ಹಾಗೂ ಯಶಸ್ವಿನಿ ಶೆಟ್ಟಿ ಪ್ರಾಂತ್ ಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿರುತ್ತಾರೆ.

**ಮಾತೃ ಭಾರತಿ ಸಭೆ 11.09.2023**

ಮಾತೃಭಾರತಿ ಸಭೆಯಲ್ಲಿ ವಿದ್ಯಾಕೇಂದ್ರದ ಸಂಚಾಲಕರಾದ ಶ್ರೀ ವಸಂತ ಮಾಧವ ಇವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಮಾತೃಭಾರತಿ ಅಧ್ಯಕ್ಷರಾಗಿ ಭವ್ಯ, ಕಾರ್ಯದರ್ಶಿಯಾಗಿ ವೇದಾವತಿ ಇವರನ್ನು ಆಯ್ಕೆ ಮಾಡಲಾಯಿತು. ಮುಖ್ಯೋಪಾಧ್ಯಾಯರು ಶ್ರೀ ಗೋಪಾಲ್ ಎಂ, ಪ್ರೌಢಶಾಲೆಯ ಆಡಳಿತ ಅಧಿಕಾರಿ ಶ್ರೀಮತಿ ಶಾಂಭವಿ, 24 ಮಾತೆಯರು ಉಪಸ್ಥಿತರಿದ್ದರು.

**ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ 15.9.23**

'ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ'ಯ ಪ್ರಯುಕ್ತ 'ಸಂವಿಧಾನದ ಪೀಠಿಕೆಯ'ನ್ನು ಎಲ್ಲಾ ವಿದ್ಯಾರ್ಥಿಗಳಿಗೆ ಬೋಧಿಸಲಾಯಿತು. ಕಾರ್ಯಕ್ರಮದಲ್ಲಿ ಮುಖ್ಯೋಪಾಧ್ಯಾಯರು ಶ್ರೀ ಗೋಪಾಲ್ ಎಂ, ಮಂತ್ರಿಮಂಡಲದ ಸದಸ್ಯರು, ಶ್ರೀಮಾನ್, ಮಾತಾಜಿಗಳು ಉಪಸ್ಥಿತರಿದ್ದರು.

**ಸರ್.ಎಂ ವಿಶ್ವೇಶ್ವರಯ್ಯನವರ ಜನ್ಮದಿನಾಚರಣೆ 15.9.23**

ಜನ್ಮ ದಿನಾಚರಣೆಯ ಅಂಗವಾಗಿ ಅವರ ಜೀವನ ಮತ್ತು ಸಾಧನೆಯನ್ನು ಪ್ರೌಢಶಾಲೆಯ ಹಿರಿಯ ಶಿಕ್ಷಕಿಯಾದ ಶ್ರೀಮತಿ ವಿನುತಾ ಇವರು ವಿದಾರ್ಥಿಗಳಿಗೆ ತಿಳಿಸಿಕೊಟ್ಟರು. ವೇದಿಕೆಯಲ್ಲಿ ಮುಖ್ಯೋಪಾಧ್ಯಾಯರು ಶ್ರೀ ಗೋಪಾಲ್.ಎಂ ಉಪಸ್ಥಿತರಿದ್ದರು.

**ಓಝೋನ್ ದಿನಾಚರಣೆ 16.09.2023**

ಓಝೋನ್ ದಿನಾಚರಣೆಯ ಪ್ರಯುಕ್ತ ಸಹ ಶಿಕ್ಷಕಿಯಾದ ಶ್ರೀಮತಿ ಸೌಮ್ಯಬಿ. ಇವರು ಓಝೋನ್ ದಿನಾಚರಣೆಯ ಮಹತ್ವವನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು.ಇದೇ ವೇಳೆ ಸಹ ಶಿಕ್ಷಕಿಯಾದ ಅರ್ಚನ ಮಾತಾಜಿ ಅವರು "ಮಾದಕ ವಸ್ತುಗಳು ಹಾಗೂ ಅದರಿಂದ ಆಗುವ ಪರಿಣಾಮಗಳ ಬಗ್ಗೆ ತಿಳಿಸಿಕೊಟ್ಟರು. ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು.

**ಕ್ಷೇತ್ರಿಯ ಮಟ್ಟಕ್ಕೆ ಆಯ್ಕೆ 17.09.2023**

ವಿದ್ಯಾಭಾರತಿ ಕರ್ನಾಟಕ ಮಂಡ್ಯದ ಮಾಧವ ವಿದ್ಯಾಲಯ ಕೆರೆಗೋಡುವಿನಲ್ಲಿ ನಡೆದ ಪ್ರಾಂತ ಮಟ್ಟದ ಕ್ರೀಡಾಕೂಟದಲ್ಲಿ 14ರ ವಯೋಮಾನದ ಬಾಲಕಿಯರ ಡಿಸ್ಕಸ್ ಥ್ರೋ ಸ್ಪರ್ಧೆಯಲ್ಲಿ ಎಂಟನೇ ತರಗತಿಯ ಗಾನವಿ ಪ್ರಥಮ ಸ್ಥಾನವನ್ನು, 17 ರ ವಯೋಮಾನದ ಬಾಲಕಿಯರ 3 ಕಿ.ಮೀ ವಾಕ್ ಸ್ಪರ್ಧೆಯಲ್ಲಿ ಒಂಬತ್ತನೇ ತರಗತಿಯ ಯಶಸ್ವಿನಿ ಪ್ರಥಮ ಸ್ಥಾನವನ್ನು ಪಡೆದು ಹೈದರಬಾದಿನಲ್ಲಿ ನಡೆಯುವ ಕ್ಷೇತ್ರ ಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ.

**ರಾಜ್ಯ ಮಟ್ಟದ ಥಾಂಗ್ ಥಾ ಸ್ಪರ್ಧೆ 21.09.23**

ವಿಜಯಪುರದಲ್ಲಿ ನಡೆದ ಥಾಂಗ–ತಾ ಸ್ಪರ್ಧೆಯಲ್ಲಿ ಶ್ರೀ ರಾಮ ಪ್ರೌಢಶಾಲೆಯ ಎಂಟನೇ ತರಗತಿಯ ಆಶಿಶ್ ಕಂಚಿನ ಪದಕವನ್ನು ಪಡೆದುಕೊಂಡಿದ್ದಾನೆ.

**ರಾಜ್ಯ ಮಟ್ಟಕ್ಕೆ ಆಯ್ಕೆ 26.09.23**

ಡಾ ಶಿವರಾಮ್ ಕಾರಂತ್ ಈಜುಕೊಳದಲ್ಲಿ ನಡೆದ ವಿದ್ಯಾಭಾರತಿ ಜಿಲ್ಲಾಮಟ್ಟದ ಈಜು ಸ್ಪರ್ಧೆಯಲ್ಲಿ ಅನರ್ಘ್ಯ ಎ ಆರ್ (8ನೇ ಏಕಲವ್ಯ) 100 ಮೀ. ಬ್ಯಾಕ್ ಸ್ಟ್ರೋಕ್ ಪ್ರಥಮ, 200 ಮೀ. ಬ್ಯಾಕ್ ಸ್ಟ್ರೋಕ್ ಪ್ರಥಮ, 200ಮೀ ಐ ಎಂ ನಲ್ಲಿ ಪ್ರಥಮ, 3 ಚಿನ್ನದ ಪದಕಗಳೊಂದಿಗೆ ರಾಜ್ಯಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾಳೆ.

**ಅಖಿಲ ಭಾರತೀಯ ಸಾಹಿತ್ಯ ಪರಿಷತ್ತಿನ ಬಂಟ್ವಾಳ ಸಮಿತಿಯ ಜವಾಬ್ದಾರಿ ಘೋಷಣೆ ಮತ್ತು ಕವಿಗೋಷ್ಠಿ 2.09.23**

ಬಂಟ್ವಾಳ ತಾಲೂಕಿನ ಅಖಿಲ ಭಾರತೀಯ ಪರಿಷತ್ತಿನ 23-24ರ ಕಾಲಾವಧಿಯ ಸಮಿತಿಯ ಜವಾಬ್ದಾರಿ ಘೋಷಣಾ ಕಾರ್ಯಕ್ರಮವನ್ನು, ಕಲ್ಲಡ್ಕ ಡಾ. ಪ್ರಭಾಕರ ಭಟ್ ವಿದ್ಯುಕ್ತವಾಗಿ ಉದ್ಘಾಟಿಸಿದರು. ಪ್ರಾರಂಭದಲ್ಲಿ ಕಲ್ಲಡ್ಕ ಶ್ರೀ ರಾಮ ಪದವಿ ಪೂರ್ವ ವಿದ್ಯಾಲಯದ ವಿದ್ಯಾರ್ಥಿಗಳು ಸ್ಯಾಕ್ಸೋಫೋನ್ ವಾದನ,ಭರತ ನಾಟ್ಯ ಮತ್ತು ಗೀತ ಗಾಯನ ಪ್ರದರ್ಶಿಸಿದರು. ಕಾರ್ಯಕ್ರಮದಲ್ಲಿ ಶ್ರೀ ಸುಂದರ ಶೆಟ್ಟಿ, ಡಾ ಸುರೇಶ ನೆಗಳಗುಳಿ, ಶ್ರೀ ಪಿ.ಬಿ.ಹರೀಶ, ಜಯಾನಂದ ಪೆರಾಜೆ ಉಪಸ್ಥಿತರಿದ್ದರು.

**ATL ಕಾರ್ಯಾಗಾರ 2.9.23**

ಪ್ರಥಮ ವಾಣಿಜ್ಯ ವಿಭಾಗದ ಗಣಕವಿಜ್ಞಾನದ ವಿದ್ಯಾರ್ಥಿಗಳಿಗೆ ಅಟಲ್ ಟಿಂಕ-ರಿಂಗ್ ಲ್ಯಾಬ್‌ನಲ್ಲಿ ರೋಹಿಣಿ ಮಾತಾಜಿ ಕಾರ್ಯಾಗಾರವನ್ನು ನಡೆಸಿಕೊಟ್ಟರು. ರಸಾಯನ ಶಾಸ್ತ್ರ ಉಪನ್ಯಾಸಕರಾದ ಅಭಿಲಾಷ್ ಶ್ರೀಮಾನ್ ಉಪಸ್ಥಿತರಿದ್ದರು.

**ಪ್ರಬಂಧ ಸ್ಪರ್ಧೆ 2.9.23**

ಶ್ರೀ ಕೃಷ್ಣ ಜನ್ಮಾಷ್ಟಮಿಯ ಪ್ರಯುಕ್ತ ಶ್ರೀ ರಾಮಕೃಷ್ಣ ತಪೋವನ ಪೊಳಲಿಯಲ್ಲಿ ನಡೆದ ಪ್ರಬಂಧ ಸ್ಪರ್ಧೆಯಲ್ಲಿ ದ್ವಿತೀಯ ವಿಜ್ಞಾನ ವಿಭಾಗದ ತನುಶ್ರೀ ಪ್ರಥಮ ಸ್ಥಾನ ಪಡೆದಿರುತ್ತಾಳೆ.

**ಸುರಸರಸ್ವತಿ ಸಭಾ ಪರೀಕ್ಷೆ 3.9.23**

ಶ್ರೀರಾಮ ಪದವಿಪೂರ್ವ ವಿದ್ಯಾಲಯದ ಭಾರವಿ ಸಂಸ್ಕೃತ ಸಂಘದಿಂದ ಶೃಂಗೇರಿಯ ಸುರಸರಸ್ವತಿ ಸಭಾ ಪರೀಕ್ಷೆಯನ್ನು ಶ್ರೀ ಮಹೇಂದ್ರ ಮಂಜುನಾಥ್ ಭಟ್ ಇವರು ನಡೆಸಿದರು.

**ಶ್ರೀ ಕೃಷ್ಣಾರ್ಪಣಂ ಸ್ಪರ್ಧೆ 08.09.2023**

ಶ್ರೀಕೃಷ್ಣ ಜನ್ಮಾಷ್ಟಮಿಯ ಪ್ರಯುಕ್ತ ಶ್ರೀರಾಮ ಪದವಿ ಪೂರ್ವ ವಿದ್ಯಾಲಯದಲ್ಲಿ ವಿದ್ಯಾರ್ಥಿಗಳಿಗೆ ಶ್ರೀ ಕೃಷ್ಣನ ವಿಗ್ರಹವನ್ನು ಅಲಂಕರಿಸುವ ಶ್ರೀ ಕೃಷ್ಣಾರ್ಪಣಂ ಸ್ಪರ್ಧೆಯನ್ನು ನಡೆಸಲಾಯಿತು.

**ಕುಣಿತ ಭಜನೆ ಮತ್ತು ದೇಶಭಕ್ತಿ ಸ್ಪರ್ಧೆ 9.9.23**

ಶಾರದಾ ಪದವಿ ಪೂರ್ವ ಕಾಲೇಜು ಕೊಡಿಯಾಲ್ ಬೈಲ್ ಮಂಗಳೂರು ಇಲ್ಲಿ ಆಯೋಜಿಸಲಾದ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲಾ ಮಟ್ಟದ ಪದವಿ ಪೂರ್ವ ವಿದ್ಯಾರ್ಥಿಗಳಿಗೆ ಹಮ್ಮಿಕೊಳ್ಳಲಾದ ಕುಣಿತ ಭಜನೆ ಮತ್ತು ದೇಶಭಕ್ತಿ ಸ್ಪರ್ಧೆಗಳಲ್ಲಿ ಪದವಿ ಪೂರ್ವ ವಿಭಾಗದ ವಿದ್ಯಾರ್ಥಿಗಳು ಪ್ರಥಮ ಸ್ಥಾನ ಮತ್ತು ರಂಗೋಲಿ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನವನ್ನು ಪಡೆದಿರುತ್ತಾರೆ.

**ರಾಣಿಅಬ್ಬಕ್ಕ ವಸ್ತು ಸಂಗ್ರಹಾಲಯಕ್ಕೆ ಭೇಟಿ** 9.9.23

ಭಗೀರಥ ಮಾನವಿಕ ಸಂಘದ ವತಿಯಿಂದ ದ್ವಿತೀಯ ಕಲಾ ವಿಭಾಗದ ವಿದ್ಯಾರ್ಥಿಗಳು ಬಿ. ಸಿ. ರೋಡ್‌ನ ರಾಣಿ ಅಬ್ಬಕ್ಕ ವಸ್ತು ಸಂಗ್ರಹಾಲಯಕ್ಕೆ ಭೇಟಿ ನೀಡಿದರು. ದೀಪಿಕಾ ಮಾತಾಜಿ, ನಯನಾ ಮಾತಾಜಿ ಮತ್ತು ರಮೇಶ್ ಶ್ರೀಮನ್ ಉಪಸ್ಥಿತರಿದ್ದರು.

**ಜಿಲ್ಲಾ ಮಟ್ಟದ ಯೋಗಾಸನ ಸ್ಪರ್ಧೆ 11.9.2023**

ದಕ್ಷಿಣ ಕನ್ನಡ ಜಿಲ್ಲಾ ಪದವಿ ಪೂರ್ವ ಕಾಲೇಜು ಶಿಕ್ಷಣ ಇಲಾಖೆ ಜಿಲ್ಲಾ ಮಟ್ಟದ ಯೋಗಾಸನ ಸ್ಪರ್ಧೆ ಶ್ರೀರಾಮ ಪದವಿ ಪೂರ್ವವಿದ್ಯಾಲಯದಲ್ಲಿ ನಡೆಸಲಾಯಿತು ವಿವೇಕಾನಂದ ಪದವಿ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ರವಿಶಂಕರ್ ಸ್ಪರ್ಧೆಯನ್ನು ಉದ್ಘಾಟಿಸಿದರು. ಶ್ರೀ ವಸಂತಮಾಧವ ಅಧ್ಯಕ್ಷತೆ ವಹಿಸಿದ್ದರು ಪ್ರಾಂಶುಪಾಲರಾದ ಶ್ರೀ ವಸಂತ ಬಲ್ಲಾಳ್ ಮತ್ತು ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಕರುಣಾಕರ್ ಉಪಸ್ಥಿತರಿದ್ದರು, ಕನ್ನಡ ಉಪನ್ಯಾಸಕರಾದ ಶ್ರೀ ಅಶೋಕ್ ಕುಮಾರ್ ಕಾರ್ಯಕ್ರಮ ನಿರ್ವಹಿಸಿದರು.

**ಫಾರ್ಮವಿಷನ್ ಸ್ಪರ್ಧೆ 11.9.23**

ಶ್ರೀನಿವಾಸ ಕಾಲೇಜ್ ವಳಚ್ಚಿಲ್ ಇಲ್ಲಿ ನಡೆದ ಫಾರ್ಮವಿಷನ್ ಸ್ಪರ್ಧೆಯಲ್ಲಿ ದ್ವಿತೀಯ ವಿಜ್ಞಾನ ವಿಭಾಗದ ದಿಶಾ ನವೀನ್ ಮತ್ತು ಯಶಿತ ಪೋಸ್ಟರ್ ಪ್ರೆಸೆಂಟೇಷನ್‌ನಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ.

**ತಾಲೂಕು ಮಟ್ಟದ ಖೋ-ಖೋ ಸ್ಪರ್ಧೆ** 13.9.23

ಬಂಟ್ವಾಳ ತಾಲೂಕು ಮಟ್ಟದ ಖೊ-ಖೊ ಸ್ಪರ್ಧೆ ಶ್ರೀರಾಮ ಪದವಿಪೂರ್ವ ವಿದ್ಯಾಲಯದಲ್ಲಿ ನಡೆಯಿತು ವಿದ್ಯಾಕೇಂದ್ರದ ಆಡಳಿತ ಸಮಿತಿಯ ಸದಸ್ಯರಾದ ಶ್ರೀಮತಿ ಮಲ್ಲಿಕಾ ಶೆಟ್ಟಿ ಖೊ-ಖೊ ಸ್ಪರ್ಧೆಯನ್ನು ಉದ್ಘಾಟಿಸಿದರು. ವಿದ್ಯಾಕೇಂದ್ರದ ಆಡಳಿತ ಸಮಿತಿಯ ಸದಸ್ಯರಾದ ಶ್ರೀ ನಾಗೇಶ್ ಕಲ್ಲಡ್ಕ, ಪ್ರಾಂಶುಪಾಲರಾದ ಶ್ರೀ ವಸಂತ ಬಲ್ಲಾಳ್ ಉಪಸ್ಥಿತರಿದ್ದರು. ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಕರುಣಾಕರ ಸ್ವಾಗತಿಸಿ ಉಪನ್ಯಾಸಕರಾದ ಶ್ರೀಮಧುಸೂದನ್ ಕಾರ್ಯಕ್ರಮ ನಿರ್ವಹಿಸಿದರು.

**ಪ್ರಜಾಪ್ರಭುತ್ವ ದಿನಾಚರಣೆ 15.09.2023**

ಪದವಿಪೂರ್ವ ವಿಭಾಗದಲ್ಲಿ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯ ಅಂಗವಾಗಿ ಸಂವಿಧಾನದ ಪೂರ್ವ ಪೀಠಿಕೆಯನ್ನು ವಿದ್ಯಾರ್ಥಿಗಳಿಗೆ ತರಗತಿಯಲ್ಲಿ ಬೋಧಿಸಲಾಯಿತು.

**ಉನ್ನತ ವ್ಯಾಸಂಗ ಮತ್ತು ಕೌಶಲ್ಯಾಧಾರಿತ ತರಬೇತಿ 16.9.2023**

ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಪಿಯುಸಿ ನಂತರ ಮುಂದೇನು ಎಂಬ ವಿಷಯದ ಕುರಿತು ಪ್ರೇರಣಾ ತರಬೇತಿ ಸಂಸ್ಥೆಯ ಕುಮಾರಿ ಮೋಕ್ಷಿತ ಮಾಹಿತಿಯನ್ನು ಒದಗಿಸಿದರು. ಉಪನ್ಯಾಸಕರಾದ ಶ್ರೀ ನಾಗರಾಜ್ ಕಾರ್ಯಕ್ರಮವನ್ನು ನಿರ್ವಹಣೆ ಮಾಡಿದರು

**ರಾಜ್ಯ ಮಟ್ಟದ ಥಾಂಗ ತಾ ಕ್ರೀಡಾಕೂಟದಲ್ಲಿ ಪ್ರಥಮ ಸ್ಥಾನ 18.09.2023**

ವಿಜಯಪುರ ಜಿಲ್ಲೆಯ ಥಾಂಗ ತಾ ಸಂಸ್ಥೆಯ ಆಶ್ರಯದಲ್ಲಿ ನಡೆದ ರಾಜ್ಯ ಮಟ್ಟದ ಥಾಂಗ ತಾ( ಮಣಿಪುರ ಕಳರಿ ಫೈಟ್) ಕ್ರೀಡಾಕೂಟದಲ್ಲಿ ದ್ವಿತೀಯ ವಾಣಿಜ್ಯ ವಿಭಾಗದ ಯತೀಶ್ ಪ್ರಥಮ ಸ್ಥಾನ ಪಡೆದು ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಇವರಿಗೆ ಮಾರ್ಷಲ್ ಆರ್ಟ್ ತರಬೇತುದಾರ ರಾಜೇಶ್ ಬ್ರಹ್ಮರಕೂಟ್ಲು ತರಬೇತಿ ನೀಡಿರುತ್ತಾರೆ.

**ಕರಾಟೆ ಸ್ಪರ್ಧೆ 26.09.2023**

ಶ್ರೀ ದುರ್ಗಾಪರಮೇಶ್ವರೀ ದೇವಾಲಯ ಕಾಲೇಜು ಕಟೀಲು ಇಲ್ಲಿ ನಡೆದ ಪದವಿ ಪೂರ್ವ ಇಲಾಖೆಯ ಜಿಲ್ಲಾ ಮಟ್ಟದ ಕರಾಟೆ ಸ್ಪರ್ಧೆಯಲ್ಲಿ ದ್ವಿತೀಯ ವಿಜ್ಞಾನ ವಿಭಾಗದ ಅರುಣ್, ವೆಂಕಟೇಶ್, ಪ್ರಣಿತ್ ಮತ್ತು ಮನೀಶ್, ದ್ವಿತೀಯ ವಾಣಿಜ್ಯ ವಿಭಾಗದ ಮನ್ವಿತ್ ಇವರು ಭಾಗವಹಿಸಿರುತ್ತಾರೆ.

**ಸಾಮೂಹಿಕ ಹುಟ್ಟುಹಬ್ಬ ಆಚರಣೆ 29.09.2023**

ಸಾಮೂಹಿಕ ಹುಟ್ಟುಹಬ್ಬ ಆಚರಣೆ ಮತ್ತು ಭಜನಾ ಕಾರ್ಯಕ್ರಮವು ನಡೆಯಿತು. ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ವಿದ್ಯಾರ್ಥಿಗಳು ಪುಷ್ಪಾರ್ಚನೆ ಮತ್ತು ನಿಧಿ ಸಮರ್ಪಣೆ ಮಾಡಿ ಮಾತಾಜಿಗಳಿಂದ ತಿಲಕ ಧಾರಣೆ ಮತ್ತು ಆರತಿ ಬೆಳಗಿಸಿಕೊಂಡು ಆಶೀರ್ವಾದ ಪಡೆದರು.

**ವರ್ಧಮಾನ ಮಹಾವೀರರ 2600 ನೇ ಜಯಂತಿ ಆಚರಣೆ 30.9.2023**

ಭಗವಾನ್ ವರ್ಧಮಾನ ಮಹಾವೀರರ 2600ನೇ ಜಯಂತಿಯನ್ನು ಆಚರಿಸಲಾಯಿತು ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಇತಿಹಾಸ ಉಪನ್ಯಾಸಕರಾದ ಶ್ರೀ ರಮೇಶ್ ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿದ್ಯಾರ್ಥಿ ಸಂಘದ ನಿರ್ದೇಶಕಿ, ಹಿಂದಿ ಉಪನ್ಯಾಸಕಿ ಶ್ರೀಮತಿ ಶೋಭಾ ವಹಿಸಿದ್ದರು ವಿದ್ಯಾರ್ಥಿನಿ ಕುಮಾರಿ ವೈಷ್ಣವಿ ಕಾರ್ಯಕ್ರಮ ನಿರೂಪಿಸಿದರು

**ಅಗ್ನಿಪಥ್‌ಗೆ ಆಯ್ಕೆ**

ಶ್ರೀರಾಮ ವಿದ್ಯಾಕೇಂದ್ರದ ಹಿರಿಯ ವಿದ್ಯಾರ್ಥಿ ಶ್ರೀ ಅಭಿಷೇಕ್ ಎ ಇವರು ಭಾರತೀಯ ಸೇನೆಯ ಅಗ್ನಿಪಥ್‌ಗೆ ಆಯ್ಕೆ ಯಾಗಿರುತಾರೆ. ಇವರು ವಿದ್ಯಾಕೇಂದ್ರದಲ್ಲಿ ಆರನೇ ತರಗತಿಯಿಂದ ದ್ವಿತೀಯ ಪಿಯುಸಿವರೆಗೆ ವ್ಯಾಸಾಂಗ ಮಾಡಿರುತ್ತಾರೆ.

**ವೆಬಿನಾರ್ ನಲ್ಲಿ ಭಾಗಿ 02.09.2023**

ಮಂಗಳೂರು ವಿಶ್ವವಿದ್ಯಾನಿಲಯದ Career Center ಆಯೋಜಿಸಿದ್ದ "Understanding the pulse of the market" ಎಂಬ ವಿಷಯದ ಕುರಿತಾದ ವೆಬಿನಾರ್‌ನಲ್ಲಿ ಕಲ್ಲಡ್ಕ ಶ್ರೀರಾಮ ಕಾಲೇಜಿನ ಪದವಿ ವಿಭಾಗದ Placement officer ಆದ ಶ್ರೀಮತಿ ವಿನುತಾಲಕ್ಷ್ಮೀ, ಇವರು ಭಾಗವಹಿಸಿದರು. ಡಾ. ಜಾರ್ಜ್ ಕೆ. ಜೆ. ಇವರು ಸಂಪನ್ಮೂಲ ವ್ಯಕ್ತಿಯಾಗಿ ಮಾಹಿತಿ ನೀಡಿದರು.

**ವಾಣಿಜ್ಯ ವಿಭಾಗದ ಪಠ್ಯಕ್ರಮ ಕಾರ್ಯಾಗಾರದಲ್ಲಿ ಭಾಗಿ: 02.09.2023**

ವಾಣಿಜ್ಯ ವಿಭಾಗದ ಉಪನ್ಯಾಸಕರಿಗೆ NEP –5ನೇ ಸೆಮಿಸ್ಟರ್ ಪಠ್ಯಕ್ರಮದ ಕುರಿತು ಮೂಡುಬಿದಿರೆ ಆಳ್ವಾಸ್ ಕಾಲೇಜಿನಲ್ಲಿ ಒಂದು ದಿನದ ಕಾರ್ಯಾಗಾರ ನಡೆಯಿತು. ಈ ಕಾರ್ಯಾಗಾರದಲ್ಲಿ ಉಪನ್ಯಾಸಕರಾದ ಶ್ರೀಮತಿ ಸುಕನ್ಯಾ, ಶ್ರೀಮತಿ ವಿನುತಾಲಕ್ಷ್ಮೀ, ಕು। ದೀಕ್ಷಿತಾ, ಶ್ರೀ.ಹರ್ಷಿತ್, ಇವರು ಭಾಗವಹಿಸಿದರು.

**ಜಿಜ್ಞಾಸಾ ಕಾರ್ಯಕ್ರಮದಲ್ಲಿ ಭಾಗಿ 03.09.2023**

ಮಂಗಳೂರಿನ ರಾಮಕೃಷ್ಣಾಶ್ರಮದಲ್ಲಿ ನಡೆದ ಜಿಜ್ಞಾಸಾ ಕಾರ್ಯಕ್ರಮದಲ್ಲಿ ಶ್ರೀರಾಮ ಪದವಿ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದರು.

**ಕಾರ್ಯಾಗಾರದಲ್ಲಿ ಭಾಗಿ 04.09.2023**

ಗಣಕಶಾಸ್ತ್ರ ವಿಭಾಗದ ಉಪನ್ಯಾಸಕರಿಗೆ NEP–5ನೇ ಸೆಮಿಸ್ಟರ್ ಪಠ್ಯಕ್ರಮದ ಕುರಿತು ಎಸ್.ಡಿ.ಎಮ್ ಕಾನೂನು ಮಹಾವಿದ್ಯಾಲಯ ಕಾಲೇಜಿನಲ್ಲಿ ಒಂದು ದಿನದ ಕಾರ್ಯಾಗಾರ ನಡೆಯಿತು. ಈ ಕಾರ್ಯಾಗಾರದಲ್ಲಿ ಉಪನ್ಯಾಸಕರಾದ ಶ್ರೀಮತಿ ಕಾವ್ಯಶ್ರೀ, ಕು।ರಕ್ಷಾ, ಕು। ಧನ್ಯಶ್ರೀ ಇವರು ಭಾಗವಹಿಸಿದರು.

**ಶಿಕ್ಷಕರ ದಿನಾಚರಣೆ 05.09.2023**

ಭವಿಷ್ ಘಟಕದ ವತಿಯಿಂದ ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಯಿತು. ಪ್ರಾಂಶುಪಾಲ ಕೃಷ್ಣಪ್ರಸಾದ್ ಅವರು ಶಿಕ್ಷಕ ದಿನಾಚರಣೆಯ ಮಹತ್ವವನ್ನು ತಿಳಿಸಿದರು. ಎಲ್ಲಾ ಬೋಧಕ–ಬೋಧಕೇತರರು ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

**ರಸಪ್ರಶ್ನೆ ಕಾರ್ಯಕ್ರಮ: 13/09/2023**

ಐಟಿ ಕ್ಲಬ್ ವತಿಯಿಂದ ಅಂತಿಮ BCA ವಿದ್ಯಾರ್ಥಿಗಳಿಗೆ ಗಣಕ ವಿಜ್ಞಾನದ ಕುರಿತು ರಸಪ್ರಶ್ನೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಗಣಕ ವಿಜ್ಞಾನ ವಿಭಾಗದ ಉಪನ್ಯಾಸಕ ವರ್ಗದವರು ಕಾರ್ಯಕ್ರಮವನ್ನು ನಿರ್ವಹಿಸಿದರು. ಐಟಿ ಕ್ಲಬ್ ನ ಅಧ್ಯಕ್ಷೆ ದೀಕ್ಷಾ ಸಿ.(ಅಂತಿಮ BCA) ಮತ್ತು ಉಪಾಧ್ಯಕ್ಷರಾದ ರಚನ್ ಪಿ. ಎಂ. (ಅಂತಿಮ BCA) ಇವರು ಕಾರ್ಯಕ್ರಮವನ್ನು ನಡೆಸಿದರು.

**ಪ್ರಬಂಧ ಸ್ಪರ್ಧೆ 13.09.2023**

ಶ್ರೀ ಸತ್ಯಸಾಯಿ ಸೇವಾ ಟ್ರಸ್ಟ್ ದ.ಕ. ಇವರು ಶ್ರೀರಾಮ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳಿಗೆ "ಭಾರತವು ಹಳ್ಳಿಯಲ್ಲಿ ವಾಸಿಸುತ್ತದೆ" ಎಂಬ ವಿಷಯದ ಕುರಿತು ರಾಷ್ಟ್ರ ಮಟ್ಟದ ಪ್ರಬಂಧ ಸ್ಪರ್ಧೆಯನ್ನು ನಡೆಸಿದರು.

**ಪ್ರಣವ ವಿದ್ಯಾರ್ಥಿ ಸಂಘ ಹಾಗೂ ವಿವಿಧ 14 ಸಂಘಗಳ ಉದ್ಘಾಟನಾ ಸಮಾರಂಭ 15.09.23**

ಪ್ರಣವ ವಿದ್ಯಾರ್ಥಿ ಸಂಘ ಹಾಗೂ ವಿವಿಧ 14 ಸಂಘಗಳ (ಪ್ರತಾಪ ಕ್ರೀಡಾ ಸಂಘ, ಪ್ರಬೋಧ ವಾಣಿಜ್ಯ ಸಂಘ, ಪ್ರದೀಪ್ತ ಸಾಂಸ್ಕೃತಿಕ ಸಂಘ, ಪ್ರಜ್ಞಾನ ಸಾಹಿತ್ಯ ಸಂಘ, ಪ್ರಭಾಸ ಮಾನವಿಕ ಸಂಘ ಇತ್ಯಾದಿ.) ಉದ್ಘಾಟನಾ ಸಮಾರಂಭ ನಡೆಯಿತು. ಹಿರಿಯಾದ ಡಾ. ಪ್ರಭಾಕರ ಭಟ್ ಅವರು ಚದುರಂಗದ ಮೂಲಕ ಕ್ರೀಡಾ ಸಂಘವನ್ನು, ಚೆಂಡೆ ಬಾರಿಸುವುದರ ಮೂಲಕ ಸಾಂಸ್ಕೃತಿಕ ಸಂಘ, ಬರವಣಿಗೆಯ ಮೂಲಕ ಸಾಹಿತ್ಯ ಸಂಘ, ಚಾಕ್– ಡಸ್ಟರ್ ನೀಡುವ ಮೂಲಕ ಭವಿಷ್ ಘಟಕ, ಗಿಡಕ್ಕೆ ನೀರೆರೆದು ಪರಿಸರ ಸಂಘ, ಹೂಡಿಕೆಯ ಮೂಲಕ ವಾಣಿಜ್ಯ ಸಂಘ, ಹಾಗೂ computer slide ಮೂಲಕ IT ಸಂಘ, ಅಗ್ನಿಹೋತ್ರದ ಮೂಲಕ ಆಧ್ಯಾತ್ಮಿಕ ಘಟಕ, ಫೋಟೋ ತೆಗೆದು ಸಾಮಾಜಿಕ ಜಾಲತಾಣ ಘಟಕ, ಪ್ರಥಮ ಚಿಕಿತ್ಸೆ ಮೂಲಕ ರೆಡ್ ಕ್ರಾಸ್ ಘಟಕ, ಬ್ಯಾಲೆಟ್ ಪೇಪರ್ ಹಾಕುವ ಮೂಲಕ ಮತದಾನ ಸಾಕ್ಷರತಾ ಘಟಕ, ಸಿಹಿ ವಿತರಿಸುವ ಮೂಲಕ ಆರೋಗ್ಯ ಮತ್ತು ನೈರ್ಮಲ್ಯ ಘಟಕ, ಸಂವಿಧಾನ ಪುಸ್ತಕ ಪ್ರದರ್ಶನದ ಮೂಲಕ ಮಾನವ ಹಕ್ಕುಗಳ ಘಟಕಗಳನ್ನು ಅತಿಥಿಗಳು ಉದ್ಘಾಟಿಸಿದರು. ವಿದ್ಯಾರ್ಥಿ ಸಂಘವನ್ನು ದೀಪ ಪ್ರಜ್ವಲಿಸಿ ಉದ್ಘಾಟಿಸಿದ ಪುತ್ತೂರಿನ ಯಮುನಾ ಬೋರ್‌ವೆಲ್ ನ ಮಾಲೀಕರು ಕು. ಕಾವ್ಯ ಕೃಷ್ಣ ಶೆಟ್ಟಿ, ವಿಜಯ ಕರ್ನಾಟಕದ ಪತ್ರಕರ್ತ ಶ್ರೀ ಹರೀಶ್ ಮಾಂಬಾಡಿ ಹಾಗೂ ಪದ್ಮನಾಭ ಕೊಟ್ಟಾರಿ ಹಿತನುಡಿಗಳನ್ನಾಡಿದರು. ಕಲ್ಲಡ್ಕ ಫಾರ್ಚೂನ್ ಮಾಲಕ ಧೀರಜ್ ಬಲ್ಲೆಕೋಡಿ, ಬಾಳಿಲ ಗ್ರಾ. ಪಂ. ಅಧ್ಯಕ್ಷ ಅಣ್ಣು ಪೂಜಾರಿ ಹಾಗೂ ಉಪಾಧ್ಯಕ್ಷೆ ಶ್ರೀಮತಿ ರಂಜಿನಿ ಎಸ್., ಗೋಳ್ತಮಜಲು ಗ್ರಾ. ಪಂ ಉಪಾಧ್ಯಕ್ಷ ಜಯಂತ್ ಮಕ್ಕಾರು, ಹಿರಿಯ ವಿದ್ಯಾರ್ಥಿ ಹಾಗೂ ವಕೀಲರು ಶ್ರೀರಾಮ್ ಪ್ರಭು, ಅತಿಥಿಗಳಾಗಿ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

**ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ 15.9.23**

ಮಾನವಿಕ ಸಂಘ ಹಾಗೂ ಮಾನವ ಹಕ್ಕುಗಳ ಆಯೋಗದ ಸಹಯೋಗದಲ್ಲಿ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯನ್ನು ಆಚರಿಸಲಾಯಿತು. ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥೆ ಶ್ರೀಮತಿ ಜಯಲಕ್ಷ್ಮೀ ಇವರು ಸಂವಿಧಾನದ ಪೀಠಿಕೆಯನ್ನು ವಾಚಿಸಿದರು. ಎಲ್ಲಾ ವಿದ್ಯಾರ್ಥಿಗಳು ಪ್ರತಿಜ್ಞಾ ಸ್ವೀಕಾರ ಮಾಡಿದರು.

**ಸ್ವದೇಶಿ ಸಪ್ತಾಹ ಕಾರ್ಯಕ್ರಮ ಉದ್ಘಾಟನೆ:**

ತಾ. 25/09/2023ರಂದು ಶ್ರೀರಾಮ ಪದವಿ ಕಾಲೇಜಿನಲ್ಲಿ ಮಾನವಿಕ ಸಂಘದ ವತಿಯಿಂದ ಪಂಡಿತ್ ದೀನದಯಾಳ ಉಪಾಧ್ಯಾಯ ಅವರ ಜನ್ಮದಿನದ ಅಂಗವಾಗಿ ದಿನಾಂಕ 25–09–23 ರಿಂದ 02–10–23 ಗಾಂಧಿ ಜಯಂತಿಯ ವರೆಗೆ ಆಚರಿಸಲಾಗುವ ಸ್ವದೇಶಿ ಸಪ್ತಾಹ ಕಾರ್ಯಕ್ರಮದಲ್ಲಿ ಆಶುಭಾಷಣ ಸ್ಪರ್ಧೆ, "ದೀನದಯಾಳರ ಆರ್ಥಿಕ ದೃಷ್ಟಿ" ಉಪನ್ಯಾಸ ಕಾರ್ಯಕ್ರಮ, ಸ್ವದೇಶಿ ಭೋಜನ, ಪ್ರತಿಭಾ ಪ್ರದರ್ಶನ, ಸ್ವದೇಶೀ ತಂತ್ರಜ್ಞಾನ ಕುರಿತು ವಿಷಯ ಮಂಡನೆ ಸ್ಪರ್ಧೆ, ಕರಕುಶಲ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು.

**ಸ್ವದೇಶಿ ಸಪ್ತಾಹದ ಸಮಾರೋಪ** 02.10.2023

ಸಪ್ತಾಹದ ಸಮಾರೋಪ ಆನ್ಲೈನ್ ಮುಖಾಂತರ ನಡೆಸಲಾಯಿತು. ಅಗ್ರಣಿ, ಡಿಜಿಟಲ್ ಸುದ್ದಿ ಮಾಧ್ಯಮದ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಶೆಟ್ಟಿ ಕಾರ್ಕಳ ಇವರು ಭಾಗವಹಿಸಿ ಸಮಾರೋಪ ಭಾಷಣ ಮಾಡಿದರು.

**ಕೌಶಲ್ಯ ವೃದ್ಧಿ ತರಬೇತಿ** 30.09.2023ರಂದು ವಾಣಿಜ್ಯ ಸಂಘದ ವತಿಯಿಂದ ಅಂತಿಮ ಬಿಕಾಂ ಪದವಿ ವಿದ್ಯಾರ್ಥಿಗಳಿಗೆ ಕೌಶಲ್ಯ ವೃದ್ಧಿ ತರಬೇತಿಯನ್ನು ನಡೆಸಲಾಯಿತು. ವಾಣಿಜ್ಯ ವಿಭಾಗದ ಉಪನ್ಯಾಸಕರಾದ ಶ್ರೀ ಹರ್ಷಿತ್ ಶ್ರೀಮಾನ್ ಇವರು ಈ ಅವಧಿಯನ್ನು ನಡೆಸಿಕೊಟ್ಟರು.

**ಧನ ಸಹಾಯ 30.09.2023**

ಭವಿಷ್ ಘಟಕದಿಂದ ಘಟಕದ ವಿದ್ಯಾರ್ಥಿನಿಯಾದ ಕು. ನಿಶಿತಾ ಇವರಿಗೆ ಸ್ನಾತ–ಕೋತ್ತರ ಪದವಿ ಮಾಡಲು ಧನ ಸಹಾಯವನ್ನು ಮಾಡಲಾಯಿತು. ಇದನ್ನು ಗುರುದತ್, ಎಮ್ ನಾಯಕ್ ಮಂಗಳೂರು ಇವರು ನೀಡಿ ಸಹಕರಿಸಿದರು.

**ಶಿಕ್ಷಣ ತಜ್ಞರ ವಿಶೇಷ ಸಭೆ ಭಾಗಿ 14.09.2023**

ರಾಷ್ಟ್ರೀಯ ಶಿಕ್ಷಣ ನೀತಿಯ ಕುರಿತು ಮಂಗಳೂರಿನ ಡೊಂಗರಕೇರಿಯಲ್ಲಿ ನಡೆದ ಶಿಕ್ಷಣ ತಜ್ಞರ ವಿಶೇಷ ಸಭೆಯಲ್ಲಿ ಸಂಸ್ಥೆಯ ಹಿರಿಯರು, ಆಡಳಿತ ಮಂಡಳಿ ಸದಸ್ಯರು ಹಾಗೂ ವಿವಿಧ ವಿಭಾಗಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಎನ್.ಇ.ಪಿ ಇದ ರ ಅನುಷ್ಠಾನ ಮತ್ತು ಈಗ ಎದ್ದಿರುವ ಗೊಂದಲಗಳ ಬಗೆಗೆ ಅಭಿಪ್ರಾಯ ಹಂಚಿಕೊಳ್ಳಲಾಯಿತು.





**ಶಿಕ್ಷಕರ ದಿನಾಚರಣೆ 5.9.2023**

ಪ್ರೌಢಶಾಲಾ ಎಲ್ಲಾ ಅಧ್ಯಾಪಕರಿಗೆ ವಿದ್ಯಾರ್ಥಿಗಳು ಹೂವು ನೀಡುವ ಮೂಲಕ ಗೌರವಿಸಿದರು. ದೀಕ್ಷಾ ಮಾತಾಜಿ ಸರ್ವೇಪಲ್ಲಿ ರಾಧಾಕೃಷ್ಣನ್ ಬಗ್ಗೆ ತಿಳಿಸಿದರು. ಕಾರ್ಯಕ್ರಮವನ್ನು ವಿದ್ಯಾರ್ಥಿ ಭೂಷಣ್ ನಿರೂಪಿಸಿ, ಸ್ವಾಗತಿ, ವಂದಿಸಿದನು.



**ಔಷಧೀಯ ಗಿಡ ವಿತರಣೆ 5.9.2023**

ವಿವೇಕ ಸಂಜೀವಿನಿ ವಿವೇಕಾನಂದ ವಿದ್ಯಾವರ್ಧಕ ಸಂಘ – ಪುತ್ತೂರು ಇದರ ಆಶ್ರಯದಂತೆ ದಿನಾಂಕ 4.9.2023 ರಂದು 150 ಔಷಧೀಯ ಗಿಡಗಳನ್ನು ಶಿಕ್ಷಕರು ವಿದ್ಯಾರ್ಥಿಗಳಿಗೆ ವಿತರಿಸಿದರು..




**ವರ್ಚುವಲ್ ಕ್ಲಾಸ್ ಉದ್ಘಾಟನೆ 13.09.23**

ಮಣಿಪಾಲ ಫೌಂಡೇಶನ್ ವಿದ್ಯಾಸಂಸ್ಥೆಗೆ ನೀಡಿದ "ವರ್ಚುವಲ್ ಕ್ಲಾಸ್"ನ್ನು ಡಾ। ಪ್ರಭಾಕರ್ ಭಟ್ ಉದ್ಘಾಟಿಸಿದರು. ಲೀಗಲ್ ಕೌನ್ಸಿಲ್ ಎಂ.ಇ.ಎಂ.ಜಿ ಶ್ರೀ ವಸಂತ ಕೃಷ್ಣ, ಡಾ। ಉಷಾ ಪೈ, (ಮಹಮಾಯ ಫೌಂಡೇಶನ್), ಶ್ರೀ ವಸಂತಮಾಧವ ಉಪಸ್ಥಿತರಿದ್ದರು.



**ಶ್ರೀರಾಮ ವನ ಗ್ರಾಮವನ ಕಾರ್ಯಕ್ರಮ 25.9.23**

ಗೋಳಮಜಲು ಗ್ರಾಮದ ಕುಚ್ಚಿಗುಡ್ಡೆಯ ಸ್ಮಶಾನ ಬಳಿಯೆಲ್ಲಿ ವಿವೇಕ ಸಂಜೀವಿನಿ–ಶ್ರೀರಾಮ ವನ ನಿರ್ಮಾಣವನ್ನು ಶ್ರೀ ಪದ್ಮನಾಭ ಕೊಟ್ಟಾರಿಯವರು ಗಿಡ ನೆಟ್ಟು ಪ್ರಾಂಭಿಸಿದರು. ಪಂ.ಅಧ್ಯಕ್ಷರಾದ ಪ್ರೇಮಾ, ಪಂಚಾಯತ್ ಸದಸ್ಯರು, ಶ್ರೀ ನಾಗೇಶ್ ಕಲ್ಲಡ್ಕ, ಮುಖ್ಯೋಪಾಧ್ಯಾಯರು, ಶಿಕ್ಷಕರು ಉಪಸ್ಥಿತರಿದ್ದರು




**ಕ್ಷೇತ್ರಿಯ ಮಟ್ಟದ ಈಜು ಸ್ಪರ್ಧೆ 28.9.2023**

ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ಬೆಂಗಳೂರಿನಲ್ಲಿ ನಡೆದ ವಿದ್ಯಾಭಾರತಿ ಪ್ರಾಂತ ಮಟ್ಟದ ಈಜು ಸ್ಪರ್ಧೆಯಲ್ಲಿ ಅನರ್ಘ್ಯ. ಎ, ಆರ್ (8ನೇ ಏಕಲವ್ಯ) 200 ಮೀ. ಐ ಎಮ್‌ನಲ್ಲಿ ತೃತೀಯ 200ಮೀ. ಬ್ಯಾಕ್ ಸ್ಟ್ರೋಕ್‌ನಲ್ಲಿ ತೃತೀಯ ಹಾಗೂ 200ಮೀ. ಬಟರ್ ಫ್ಲೈ ನಲ್ಲಿ ಪ್ರಥಮ ಸ್ಥಾನವನ್ನು ಪಡೆದು ಕ್ಷೇತ್ರೀಯ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾಳೆ.



**ಸ್ವಚ್ಛತಾ ಆಂದೋಲನ 30.09.23**

ಕೇಂದ್ರ ಸರಕಾರದ ಸೂಚನೆಯಂತೆ ಸ್ವಚ್ಛತಾ ಆಂದೋಲನವಾದ "ಸ್ವಚ್ಛತೆಯೇ ಸೇವೆ" ಕಾರ್ಯಕ್ರಮವು ನಡೆಯಿತು. ಆಶಾಕಾರ್ಯಕರ್ತೆ ಶ್ರೀಮತಿ ನಳಿನಿ ಸ್ವಚ್ಛತೆಯ ಮಹತ್ವವನ್ನು ತಿಳಿಸಿಕೊಟ್ಟರು. ಕೃಷಿಕರು ಶ್ರೀ ಕಮಲಾಕ್ಷ ಶಂಬೂರು ಇವರು ನೀರಿನ ಮಹತ್ವವನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು.

## ಪದವಿಪೂರ್ವ




**ಪ್ರಾಂತೀಯ ಗಣಿತ ವಿಜ್ಞಾನ ಮೇಳ 02.09.2023**

ಕಲ್ಬುರ್ಗಿಯಲ್ಲಿ ನಡೆದ ಪ್ರಾಂತೀಯ ಗಣಿತ ವಿಜ್ಞಾನ ಮೇಳ ಮತ್ತು ಸಂಸ್ಕೃತಿ ಮಹೋತ್ಸವ 2023 ರಲ್ಲಿ ಪದವಿಪೂರ್ವ ಕಾಲೇಜಿನ, ವಿಜ್ಞಾನ ಪ್ರದರ್ಶನದ ಸ್ಪರ್ಧೆಯಲ್ಲಿ ಶೆಟ್ಟಿ ಶರಣ್ ಮತ್ತು ತಿಲಕ್ ಪ್ರಥಮ ಸ್ಥಾನ ಪಡೆದಿದ್ದಾರೆ. ಶ್ರೀನಿವಾಸ, ದೀಕ್ಷಿತ್, ತುಷಾರ್ ಇವರು ಸಂಸ್ಕೃತಿ ಜ್ಞಾನ ರಸಪ್ರಶ್ನೆಯಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ.




**ಅ.ಭಾ.ಸಾಹಿತ್ಯ ಪರಿಷತ್ತಿನ ಬಂಟ್ವಾಳ ಸಮಿತಿಯ ಜವಾಬ್ದಾರಿ ಘೋಷಣೆ ಮತ್ತು ಕವಿಗೋಷ್ಠಿ 2.9.23**

ಬಂಟ್ವಾಳ ತಾಲೂಕಿನ ಅಖಿಲ ಭಾರತೀಯ ಪರಿಷತ್ತಿನ 23–24ರ ಕಾಲಾವಧಿಯ ಸಮಿತಿಯ ಜವಾಬ್ದಾರಿ ಘೋಷಣಾ ಕಾರ್ಯಕ್ರಮವನ್ನು, ಕಲ್ಲಡ್ಕ ಡಾ. ಪ್ರಭಾಕರ ಭಟ್ ವಿದ್ಯುಕ್ತವಾಗಿ ಉದ್ಘಾಟಿಸಿದರು.



**ಅಟಲ್ ಟಿಂಕರಿಂಗ್ ಲ್ಯಾಬ್‌ನಲ್ಲಿ ಕಾರ್ಯಾಗಾರ4.9.23**

ಸಹ್ಯಾದ್ರಿ ಕಾಲೇಜ್ ಆಫ್ ಎಂಬಿಎಯಲ್ಲಿ ಉದ್ಯಮಶೀಲತೆ, ಸ್ಟಾರ್ಟ್ ಅಪ್ ಮತ್ತು ರಿಯಲಮ್ ಆಫ್ ಇನ್ನೋವೇಶನ್ ಕುರಿತು ಒಂದು ದಿನದ ಕಾರ್ಯಾಗಾರ ನಡೆಸಲಾಯಿತು. ಪ.ಪೂರ್ವ ವಿಭಾಗದ 22 ವಿದ್ಯಾರ್ಥಿಗಳು ಭಾಗವಹಿಸಿದ್ದು, ಎಟಿಎಲ್‌ನ ರೋಹಿಣಿ ಮಾತಾಜಿ ವಿದ್ಯಾರ್ಥಿಗಳಿಗೆ ಸಹಕರಿಸಿದರು.



**ಶಿಕ್ಷಕರ ದಿನಾಚರಣೆ 05.09.2023**

ಶ್ರೀರಾಮ ಪದವಿಪೂರ್ವ ವಿದ್ಯಾಲಯದಲ್ಲಿ ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಅರ್ಥಶಾಸ್ತ್ರ ಉಪನ್ಯಾಸಕರಾದ ಕುಮಾರಿ ನಯನ ಇವರು ಶಿಕ್ಷಕರ ದಿನದ ಮಹತ್ವವನ್ನು ತಿಳಿಸಿದರು. ಪ್ರಾಚಾರ್ಯರು, ಎಲ್ಲಾ ಉಪನ್ಯಾಸಕರು ಉಪಸ್ಥಿತರಿದ್ದರು.



**ರಾಜ್ಯ ಮಟ್ಟದ ಅಥ್ಲೆಟಿಕ್ ಕ್ರೀಡಾಕೂಟ 15.09.23**

ಶ್ರೀ ಮಾಧವ ವಿದ್ಯಾಲಯ ಕೆರೆಗೋಡು, ಮಂಡ್ಯದಲ್ಲಿ ನಡೆದ ವಿದ್ಯಾಭಾರತಿ ಕರ್ನಾಟಕ ರಾಜ್ಯ ಮಟ್ಟದ ಅಥ್ಲೆಟಿಕ್ ಕ್ರೀಡಾಕೂಟದಲ್ಲಿ ಏಳು ಮಂದಿ ವಿದ್ಯಾರ್ಥಿಗಳು ಪ್ರಥಮ ಸ್ಥಾನ ಮತ್ತು ಒಂಭತ್ತು ಮಂದಿ ದ್ವಿತೀಯ ಸ್ಥಾನ ಮತ್ತು ಮೂರು ಮಂದಿ ತೃತೀಯ ಸ್ಥಾನ ಪಡೆದಿರುತ್ತಾರೆ.



**ಜಿಲ್ಲಾಮಟ್ಟದ ಅಥ್ಲೆಟಿಕ್ ಕ್ರೀಡಾಕೂಟ 9.9.23**

ವಿವೇಕಾನಂದ ವಿದ್ಯಾವರ್ಧಕ ಸಂಘ ನೆಹರು ನಗರ ಪುತ್ತೂರು ಇಲ್ಲಿ ನಡೆದ ವಿದ್ಯಾಭಾರತಿ ಜಿಲ್ಲಾಮಟ್ಟದ ಅಥ್ಲೆಟಿಕ್ ಚಾಂಪಿಯನ್ನಿಪ್ ನಲ್ಲಿ ತರುಣ ವರ್ಗದ ಬಾಲಕಿಯರ ವಿಭಾಗವು ಸಮಗ್ರ ತಂಡ ಪ್ರಶಸ್ತಿ ಪಡೆದಿದೆ. ತರುಣ ವರ್ಗದ ಬಾಲಕರ ವಿಭಾಗವು ದ್ವಿತೀಯ ಸಮಗ್ರ ತಂಡ ಪ್ರಶಸ್ತಿ ಪಡೆದಿದೆ.



**ಆಗತ–ಸ್ವಾಗತ ಕಾರ್ಯಕ್ರಮ–ಪ್ರವೇಶೋತ್ಸವ– 2023**

ದಿನಾಂಕ 09–09–2023ರ ಶನಿವಾರದಂದು 2023–2024ನೇ ಸಾಲಿನ ಪ್ರಥಮ ವರ್ಷದ ಪದವಿ ವಿದ್ಯಾರ್ಥಿಗಳಿಗೆ ಆಗತ– ಸ್ವಾಗತ ಕಾರ್ಯಕ್ರಮ–ಪ್ರವೇಶೋತ್ಸವ– 2023 ನಡೆಯಿತು. ದೀಪ ಪ್ರಜ್ವಲನ ಹಾಗೂ ಸರಸ್ವತಿ ವಂದನೆಯೊಂದಿಗೆ ಕಾರ್ಯಕ್ರಮ ಪ್ರಾರಂಭಗೊಂಡಿತು.



**NSS ಉದ್ಘಾಟನೆ 25.09.23**

NSSನ್ನು ಸಂ.ಫಿಲೋಮಿನಾ ಕಾಲೇಜ್ ನ ಆಡಳಿತ ಮತ್ತು ನಿರ್ವಹಣಾ ವಿಭಾಗದ ಮುಖ್ಯಸ್ಥರಾದ ಪ್ರೊ.ರಾಧಾಕೃಷ್ಣ ಕೆದಿಲ ಕಾರ್ಯಕ್ರಮ ಉದ್ಘಾಟಿಸಿ ಮಾಹಿತಿ ನೀಡಿದರು, ಶ್ರೀ ನಾಗೇಶ್ ಕಲ್ಲಡ್ಕ ಅಧ್ಯಕ್ಷತೆ ವಹಿಸಿದ್ದರು. ಪ್ರಾಚಾರ್ಯರು ಮತ್ತು, ಯೋಜನಾಧಿಕಾರಿ ಶ್ರೀ ಯತಿರಾಜ್ ಪಿ, ಸಹ ಯೋಜನಾಧಿಕಾರಿ ಕು. ದೀಕ್ಷಿತಾ ಉಪಸ್ಥಿತರಿದ್ದರು.




**ವಿದ್ಯಾರ್ಥಿ ಸಂಘದ ಚುನಾವಣೆ;**

2023ನೇ ಸಾಲಿನ ವಿದ್ಯಾರ್ಥಿ ಸಂಘದ ಪದಾಧಿಕಾರಿಗಳ ಆಯ್ಕೆಯ ಕಾರ್ಯಕ್ರಮವು ತಾ. 05.09.2023ರಂದು ನಡೆಯಿತು. ವಿದ್ಯಾರ್ಥಿ ಸಂಘದ ಅಧ್ಯಕ್ಷ ಸ್ಥಾನಕ್ಕೆ (2) ಹಾಗೂ ಕಾರ್ಯದರ್ಶಿ ಸ್ಥಾನಕ್ಕೆ(2) ಅಂತಿಮ ವರ್ಷದ ವಿದ್ಯಾರ್ಥಿಗಳು ಹಾಗೂ ಸಹ ಕಾರ್ಯದರ್ಶಿ ಸ್ಥಾನಕ್ಕೆ(5) ದ್ವಿತೀಯ ವರ್ಷದ ವಿದ್ಯಾರ್ಥಿಗಳು ಸ್ಪರ್ಧಿಸಿದ್ದರು. ಅಧ್ಯಕ್ಷ ಸ್ಥಾನಕ್ಕೆ ಅರ್ಹ ವ್ಯಕ್ತಿಯ ಆಯ್ಕೆಯು ಮತ್ತು ಕಾರ್ಯದರ್ಶಿ ಮತ್ತು ಸಹಕಾರ್ಯದರ್ಶಿ ಸ್ಥಾನದ ಅಭ್ಯರ್ಥಿಗಳ ಆಯ್ಕೆಯು ಬಹುಮತ ಆಧಾರಿತವಾಗಿ ನಡೆಯಿತು.




**ಬಿಎ ಪದವಿ 100% ಫಲಿತಾಂಶ**

2022–23ನೆಯ ಸಾಲಿನಲ್ಲಿ ಅಂತಿಮ ಬಿಎ ಪದವಿ ಪರೀಕ್ಷೆ ಬರೆದ ಎಲ್ಲಾ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, 100% ಫಲಿತಾಂಶ ದಾಖಲಾಗಿದೆ.

**ಬಿ.ಕಾಂ ಪದವಿ 92.42% ಫಲಿತಾಂಶ**

2022–2023ನೇ ಸಾಲಿನ ಅಂತಿಮ ಬಿ.ಕಾಂ ಪದವಿ ಪರೀಕ್ಷೆಯಲ್ಲಿ 92.42%ಫಲಿತಾಂಶ ದಾಖಲಾಗಿರುತ್ತದೆ.ಪರೀಕ್ಷೆ ಬರೆದ 66 ವಿದ್ಯಾರ್ಥಿಗಳ ಪೈಕಿ 37 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿ,19 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ,5 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿ ಪಡೆದು ಉತ್ತೀರ್ಣರಾಗಿರುತ್ತದೆ. ಬಿ.ಕಾಂ. ಪದವಿಯಲ್ಲಿ ಯಕ್ಷಿತ್ ಇವರು 93.89% ಅತಿಹೆಚ್ಚು ಅಂಕ ಪಡೆದು ಕಾಲೇಜಿಗೆ ಕೀರ್ತಿ ತಂದಿರುತ್ತಾರೆ.

**ಬಿ.ಎಸ್.ಸಿ ಪದವಿ 100% ಫಲಿತಾಂಶ**

2022–2023ನೇ ಸಾಲಿನ ಅಂತಿಮ ಬಿ.ಎಸ್.ಸಿ ಪದವಿ ಪರೀಕ್ಷೆಯಲ್ಲಿ 100%ಫಲಿತಾಂಶ ದಾಖಲಾಗಿರುತ್ತದೆ.ಪರೀಕ್ಷೆ ಬರೆದ 10 ವಿದ್ಯಾರ್ಥಿಗಳ ಪೈಕಿ 6 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿ ಪಡೆದು ಉತ್ತೀರ್ಣರಾಗಿರುತ್ತದೆ. ಬಿ.ಎಸ್.ಸಿ ಪದವಿಯಲ್ಲಿ ಅರ್ಪಿತಾ ಕೆ ಎಂ ಇವರು 96.18% ಶೇಕಡಾ ಅಂಕ ಪಡೆದು ಕಾಲೇಜಿಗೆ ಕೀರ್ತಿ ತಂದಿರುತ್ತಾರೆ.

ಶುಭಕೋರುವ :

**ಶ್ರೀರಾಮ ಸೌಹಾರ್ದ ಸಹಕಾರಿ ನಿಯಮಿತ**

ಪ್ರಧಾನ ಕಚೇರಿ: ಹನುಮಾನ್ ನಗರ ಕಲ್ಲಡ್ಕ ಬಂಟ್ವಾಳ ತಾಲೂಕು 574222 ದೂ: 08255 275173, 275373

ಶಾಖೆ : ಶ್ರೀರಾಮ ವಾಣಿಜ್ಯ ಸಂಕೀರ್ಣ ರಾಮನಗರ ಕಲ್ಲಡ್ಕ

ಕಲ್ಲಡ್ಕ ಶ್ರೀರಾಮ ವಾಣಿಜ್ಯ ಸಂಕೀರ್ಣದ ರಾಮ ನಗರ ಶಾಖೆಯಲ್ಲಿ E-Stamping ಠಸೆ ಕಾಗದ ಸೌಲಭ್ಯವಿದೆ

| ಸಾಲ ಸೌಲಭ್ಯಗಳು | | ಠೇವಣಿ ಮೇಲೆ ಆಕರ್ಷಕ ಬಡ್ಡಿ ದರಗಳು | |
|---|---|---|---|
| ಚಿನ್ನಾಭರಣ ಸಾಲ | – 10.5% | 91ದಿನಗಳವರೆಗೆ | – 7.5% |
| ಜಾಮೀನು ಸಾಲ | – 16% | 92ರಿಂದ 181 ದಿನಗಳು | – 8% |
| ಅಡವು ಸಾಲ | – 13% | 182 ರಿಂದ 364 ದಿನಗಳು | – 9% |
| ವಾಹನ ಸಾಲ | – 11.5% | 1 ವರ್ಷ ಮತ್ತು ಮೇಲ್ಪಟ್ಟು | – 9.5% |
| ಗೃಹ ನಿರ್ಮಾಣ ಸಾಲ | – 11% | | |

ಸೌಲಭ್ಯ

ಆವರ್ತನ ಠೇವಣಿ (R.D)
ಸಂಚಯ ಠೇವಣಿ (S.D)
ನಿರಂತರ ಠೇವಣಿ (ಪಿಗ್ಮಿ)

ಹಿರಿಯ ನಾಗರಿಕರಿಗೆ ಮಾಜಿ ಯೋಧರಿಗೆ ಮತ್ತು ವಿಧವೆಯರಿಗೆ 0.5% ಬಡ್ಡಿ ಹೆಚ್ಚಿಗೆ ನೀಡಲಾಗುವುದು.

Postal Regn No. PTR/136/2022-24 Licensed to Post without pre-payment License No: SK/WPP/PTR/117/2022-24

ಸರಯೂ

Vol. : 10 Issue :5 Rs. 10/-

KARKAN/2014/62363
Posted at Kalladka P.O.
on 10th and 15th of
Every month

SRI RAMA VIDYAKENDRA TRUST (R.) Hanuman Nagar, Kalladka,
Bantwal Tq., Dakshina Kannada, Karnataka 574 222
Website : www.shriramakalladka.in / www.srvk.org E-mail : info@srvk.org

BOOK POST

ಸವಿಧೇ,

Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Trust, Hanuman Nagara, Kalladka, Bantwal Tq, Dakshina Kannada - 574 222. Phone : 9449728763 Printed at Digantha Mudrana Ltd. Magaluru 575008, Bantwal Tq., Dakshina Kannada, Karnataka. Registration No. : KARKAN/2014/62363